# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ


**ಅಂದು... ಇಂದು...**



ನಂಜನಗೂಡಿನ ಐತಿಹಾಸಿಕ ಪತಿತಪಾವನ ಶ್ರೀ ವೇಣುಗೋಪಾಲ ಹೃದಯ ಮಂದಿರ ದೇವಸ್ಥಾನವನ್ನು ಸ್ಥಳೀಯ ಯುವ ಬ್ರಿಗೇಡ್ ಕಾರ್ಯಕರ್ತರು ಸ್ವಚ್ಛಗೊಳಿಸಿದರು


ಸಂಪುಟ : 38 ಸಂಚಿಕೆ : 3 ದುರ್ಮುಖಿ–ಭಾದ್ರಪದ ಕಲಿಯುಗಾಬ್ದ 5118 15–9–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಹೈದರಾಬಾದ್ ವಿಮೋಚನೆ: ಒಂದು ಮೆಲುಕು

ಸ್ವಾತಂತ್ರ್ಯದ ಉತ್ತರಾರ್ಧ ಮತ್ತು 1948ರ ಮೊದಲಲ್ಲಿ ದೇಶದ ಮುಂದಿದ್ದ ಅತ್ಯಂತ ಗುರುತರ ಸವಾಲೆಂದರೆ ದೇಶದಲ್ಲೆಲ್ಲ ಹರಡಿದ್ದ 564 ಸ್ವತಂತ್ರ ರಾಜಸಂಸ್ಥಾನಗಳನ್ನು ಭಾರತದೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆ. ಸಮಸ್ಯೆಯ ಜಟಿಲತೆಯನ್ನು ತಮ್ಮ ರಾಜಕೀಯ ಮುತ್ಸದ್ದಿತನ, ಧೃಡನಿರ್ಧಾರ ಹಾಗೂ ದೂರದರ್ಶಿತ್ವಗಳಿಂದ ಬಗೆಹರಿಸಿದ ಕೀರ್ತಿ ಸರ್ದಾರ್ ಪಟೇಲರಿಗೆ ಸಲ್ಲುತ್ತದೆ.


ಅಂದಿನ ವಿಶೇಷ ಪರಿಸ್ಥಿತಿಗಳಿಂದಾಗಿ ವಿಲೀನಪ್ರಕ್ರಿಯೆಯಿಂದ ಹೊರಗುಳಿದಿದ್ದು ಮೂರುಪ್ರದೇಶಗಳು: ಜಮ್ಮು–ಕಾಶ್ಮೀರ, ಜುನಾಗಢ ಮತ್ತು ಹೈದರಾಬಾದ್. ಜಮ್ಮು–ಕಾಶ್ಮೀರದ ವಿಷಯವನ್ನು ಪಂಡಿತ್ ನೆಹರೂ ತಮ್ಮ ವೈಯಕ್ತಿಕ ಪ್ರತಿಷ್ಠೆಯ ಸಂಗತಿಯಾಗಿಸಿಕೊಂಡು ಇತ್ತ ಸಮಸ್ಯೆಯನ್ನು ಬಗೆಹರಿಸಲೂ ತಿಳಿಯದೆ ಬೇರೆಯವರಿಗೆ ವಹಿಸಲೂ ಮನಸ್ಸಿಲ್ಲದೇ ಮಾಯದ ವ್ರಣವಾಗಿಸಿದ ಸಂಗತಿ ಸರ್ವವಿದಿತ. ಸೌರಾಷ್ಟ್ರದ ಜುನಾಗಢದ ದಿವಾನನ ಪಾಕಿಸ್ತಾನ ಪ್ರೇಮ ಮತ್ತು ರಾಜ್ಯದ 90 ಪ್ರತಿಶತ ಹಿಂದೂಜನತೆಯ ಭಾರತದ ಪ್ರೀತಿಯ ಕುರಿತು ಸ್ಪಷ್ಟ ತಿಳುವಳಿಕೆ ಹೊಂದಿದ್ದ ಪಟೇಲರು


> **“ಆ ಹೊತ್ತಿಗೆ ಹೈದರಾಬಾದ್ 82,313 ಚದರ ಮೈಲಿ ವಿಸ್ತಾರದೊಂದಿಗೆ ದೇಶದಲ್ಲೇ ಅತಿ ದೊಡ್ಡ ಹಾಗು ಶ್ರೀಮಂತ ಸಂಸ್ಥಾನವಾಗಿತ್ತು. ಸ್ವಂತ ಸೇನೆ, ರೇಡಿಯೋ ಮತ್ತು ನಾಣ್ಯ ಚಲಾವಣೆ ಪದ್ಧತಿ, ಪೋಸ್ಟ್ ಸೇವೆ, ಖಾಸಗಿ ರಕ್ಷಕ ಪಡೆಗಳಂತಹ ವ್ಯವಸ್ಥೆಯನ್ನು ಹೊಂದಿದ್ದ ಏಕಮಾತ್ರ ರಾಜ್ಯವಾಗಿತ್ತು. ಭಾರತದ ಇತರ ಸಂಸ್ಥಾನಗಳ ರಾಜರು ಇಂಗ್ಲೆಂಡಿನ ರಾಜನ ಅಧೀನ ಸಾಮಂತರಂತಿದ್ದರೆ ಹೈದರಾಬಾದ್ ನಿಜಾಮ ಮೀರ್ ಓಸ್ಮಾನ್ ಅಲಿಖಾನ್ ನ ಅಂತಸ್ತು ಸಾಮ್ರಾಟನ ಮಿತ್ರನದಾಗಿತ್ತು. ಹಾಗಾಗಿಯೇ ಬ್ರಿಟಿಷರಿಗೆ ಮಿಕ್ಕ ಸಂಸ್ಥಾನಾಧಿಪತಿಗಳು ‘ಹಿಸ್ ಹೈನೆಸ್’ ಗಳಾದರೆ ನವಾಬ ಮಾತ್ರ ‘ಹಿಸ್ ಎಕ್ಸಾಲ್ಟೆಡ್ ಹೈನೆಸ್’ ಆಗಿದ್ದ. ಬ್ರಿಟಿಷ್ ಸಾಮ್ರಾಜ್ಯದ ನಂಬಿಕಸ್ಥ ಸ್ನೇಹಿತ (ಫೈತ್‌ಫುಲ್ ಅಲೈ) ಎಂಬ ಅಭಿದಾನ ಹೊಂದಿದ್ದ ಕಾರಣಕ್ಕೆ ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್‌ರಿಗೆ ನವಾಬನ ಹಿತಾಸಕ್ತಿಯ ವಿಷಯದಲ್ಲಿ ವಿಶೇಷ ಕಾಳಜಿಯಿತ್ತು.”**

1947 ಅಕ್ಟೋಬರ್–ನವೆಂಬರ್ ಸಮಯದಲ್ಲಿ ಸೇನೆಯನ್ನು ಸಂಸ್ಥಾನದ ಬಾಗಿಲಿಗೇ ಕಳಿಸಿದರು. ಆದರೆ ಸೇನೆಗೇಕೆ ಕಷ್ಟ ಎಂದು ದಿವಾನ ಗಂಟುಮೂಟೆ ಕಟ್ಟಿ ಹಿಂದಿನ ರಾತ್ರಿಯೇ ಪಾಕಿಸ್ತಾನಕ್ಕೆ ಓಡಿಹೋಗಿದ್ದ. 1948 ಫೆಬ್ರುವರಿ 20ರಂದು ನಡೆದ ವಿಧ್ಯುಕ್ತ ಜನಾಭಿಪ್ರಾಯ ಸಂಗ್ರಹದಲ್ಲಿ ಅಭೂತಪೂರ್ವ ಬಹುಮತದೊಂದಿಗೆ ಜುನಾಗಢದ ಜನತೆ ಭಾರತದೊಡನೆ ವಿಲೀನವನ್ನು ಅನುಮೋದಿಸಿತು. ನಂತರ ಉಳಿದದ್ದೇ ಹೈದರಾಬಾದಿನ ಪ್ರಶ್ನೆ.

ವಿಲೀನಕ್ಕಾಗಿ ನಿಜಾಮನು ಸರಳಮಾರ್ಗದಲ್ಲಿ ಒಪ್ಪುವ ಸಂಭವ ಕಡಿಮೆಯೇ ಎಂದು ಮೊದಲೇ ಊಹಿಸಿದ್ದ ಪಟೇಲರು ಮೌಂಟ್

ಸ್ವಾತಂತ್ರ್ಯಾನಂತರ<br>15 ಆಗಸ್ಟ್ 1947 ರಿಂದ 16 ಸೆ. 1948 | ವಿಮೋಚನಾನಂತರ<br>17 ಸೆಪ್ಟೆಂಬರ್ 1948ರ ನಂತರ



ಹೈದರಾಬಾದ್ ರಾಜ್ಯಕ್ಕೆ ಭಾರತದ ಏಜೆಂಟ್ ಜನರಲ್ ಆಗಿದ್ದ ಕೆ.ಎಂ. ಮುನ್ಷಿ

ಬ್ಯಾಟನ್ನನ ಸಂತುಷ್ಟಿಗಾಗಿ ಹೈದ್ರಾಬಾದ್ ಸರ್ಕಾರದೊಂದಿಗೆ 29 ನವೆಂಬರ್ 1947ರಂದು ‘ಯಥಾಸ್ಥಿತಿ ಒಪ್ಪಂದ’ಕ್ಕೆ ಸಮ್ಮತಿಸಿದರು. ಒಪ್ಪಂದದ ಪ್ರಕಾರ, ನಿಜಾಮನ ಆಂತರಿಕ ಆಡಳಿತದ ವಿಷಯಗಳ ಹೊರತಾಗಿ ಆತನ ವಿದೇಶವಾರ್ತೆಯನ್ನು ಮಾತ್ರ ಭಾರತ ಸರ್ಕಾರವು ವಹಿಸಿಕೊಳ್ಳುವುದೆಂದೂ, ಬದಲಿಗೆ ನಿಜಾಮನು ಪಾಕಿಸ್ತಾನವನ್ನು ಸೇರುವುದಿಲ್ಲ ಎಂಬ ಆಶ್ವಾಸನೆಯನ್ನೂ ಪಡೆಯಲಾಯಿತು. ಒಪ್ಪಂದದ ಭಾಗವಾಗಿಯೇ ಭಾರತ ಸರ್ಕಾರದ ಏಜಂಟ್ ಜನರಲ್ ಆಗಿ ಕನ್ಹಯ್ಯಲಾಲ್ ಮಾನೆಕ್‌ಲಾಲ್ ಮುನ್ಷಿ (1887–1971) – ಕೆ.ಎಂ. ಮುನ್ಷಿಯವರು ಪಟೇಲರಿಂದ ನಿಯುಕ್ತಿಗೊಂಡು ಹೈದರಾಬಾದಿಗೆ ಬಂದಿಳಿದರು.

ಪಟೇಲರ ನಿರೀಕ್ಷೆಯಂತೆಯೇ ಯಥಾಸ್ಥಿತಿ ಒಪ್ಪಂದದ ಕರಾರುಗಳನ್ನು ನಿಜಾಮ್ ಸರ್ಕಾರ ನಿರಂತರ ಉಲ್ಲಂಘಿಸುತ್ತಲೇ ಇತ್ತು. ವಿದೇಶಗಳಿಂದ ಶಸ್ತ್ರಾಸ್ತ್ರಗಳ ಸಂಗ್ರಹಣೆ, ಆಂತರಿಕ ಸೇನೆಯನ್ನು ಬಲಪಡಿಸುವುದು, ಕರಾಚಿಯಲ್ಲಿ ತನ್ನ ಸಂಪರ್ಕಾಧಿಕಾರಿಯನ್ನು ಸ್ಥಾಪಿಸುವುದು, ಭಾರತದ ನಾಣ್ಯಗಳನ್ನು ತನ್ನ ರಾಜ್ಯದಲ್ಲಿ ಪ್ರತಿಬಂಧಿಸುವಂತಹ ಅನೇಕ ಭಾರತ ವಿರೋಧಿ ಚಿತಾವಣೆಗಳು ಹೆಚ್ಚುತ್ತಲೇ ಇದ್ದವು. ಭಾರತದ ವಿರುದ್ಧ ಯುದ್ಧಹೂಡಲು ಪಾಕಿಸ್ತಾನಕ್ಕೆ 20 ಕೋಟಿ ರೂಪಾಯಿಗಳ ಸಹಾಯವನ್ನೂ ನಿಜಾಮ್ ನೀಡಿದ್ದ. ನಿಜಾಮನ ಮಹತ್ವಾಕಾಂಕ್ಷೆಗಳಿಗೆ ನೀರೆರೆಯಲು ಮೊಹಮ್ಮದ್ ಅಲಿ ಜಿನ್ನಾನ ಸಲಹೆಯ ಮೇರೆಗೆ ಹೈದರಾಬಾದಿನ ಪ್ರಧಾನಿಯಾಗಿ ನಿಯುಕ್ತಿಗೊಂಡಿದ್ದ ಲಯಿಕ್ ಅಲಿ ಮತ್ತು ರಜಾಕಾರರೆಂಬ ಮುಸ್ಲಿಂ ಖಾಸಗಿ ರಕ್ಷಣಾಪಡೆ ಹಾಗೂ ಇತ್ತೆಹಾದ್–ಉಲ್–ಮುಸಲ್ಮಿನ್ (ಈಗಿನ ಪ್ರಾದೇಶಿಕ ಪಕ್ಷ ಎಐಎಂಐಎಂ ನ ಮೂಲರೂಪ) ಎಂಬ ಸಂಘಟನೆಯ ಮುಖ್ಯಸ್ಥ ಕಾಸಿಂ ರಜ್ವಿಯ ಬೆಂಬಲವೂ ಇತ್ತು. ಇವರಿಬ್ಬರಿಂದ ಪ್ರೇರಿತನಾದ ನಿಜಾಮ್ ಪಾಕಿಸ್ತಾನದೊಂದಿಗೆ ವಿಲೀನಗೊಳ್ಳುವ ಕನಸು ಕಾಣತೊಡಗಿದ್ದ.

ಪಟೇಲರೊಡನೆ ನಡೆದ ಭೇಟಿಯ ಸಂದರ್ಭದಲ್ಲಿ ‘ಕಟ್ಟಕಡೆಯ ಮುಸ್ಲಿಮನಿರುವವರೆಗೆ ಭಾರತ ಒಕ್ಕೂಟದ ವಿರುದ್ಧ ನಾವು ಯುದ್ಧ ಮಾಡುತ್ತೇವೆ’ ಎಂಬ ಕಾಸಿಂ ರಜ್ವಿಯ ಎಚ್ಚರಿಕೆಗೆ ಅಷ್ಟೇ ಸಮಾಧಾನಚಿತ್ತರಾಗಿ ಪಟೇಲರು ‘ನೀವು ಆತ್ಮಹತ್ಯೆಗೇ ಸಂಕಲ್ಪ ಮಾಡಿರುವಾಗ ನಾನು ಹೇಗೆ ತಡೆಯಲಿ’ ಎಂಬ ಪ್ರತ್ಯುತ್ತರ ಕಳುಹಿಸಿಕೊಟ್ಟಿದ್ದರು. 1948ರ ಜೂನ್ 13ರಂದು ನಿಜಾಮನನ್ನು ರಕ್ಷಿಸುವ ತನ್ನ ಕೊನೆಯ ಪ್ರಯತ್ನವಾಗಿ ಮೌಂಟ್ ಬ್ಯಾಟನ್, ಭಾರತ ಸರ್ಕಾರ ಅಪೇಕ್ಷಿಸಿದಲ್ಲಿ ರಕ್ಷಣೆ, ವಿದೇಶಾಂಗ ಮತ್ತು ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಬಯಸಿದ ಕಾನೂನುಗಳನ್ನು ನಿಜಾಮನ ಸರ್ಕಾರ ಜಾರಿ ಮಾಡಬೇಕು ಎಂಬ ತಾತ್ಪೂರ್ತಿಕ ಒಪ್ಪಂದವೊಂದನ್ನು ಹೈದರಾಬಾದಿಗೆ ಒಪ್ಪಿಸಿದ. ನಿರೀಕ್ಷೆಯಂತೆಯೇ ನಿಜಾಮ್ ಸರ್ಕಾರ ಈ ಕ್ರಮವನ್ನೂ ನಿರಾಕರಿಸುವುದರೊಂದಿಗೆ ಮಿಲಿಟರಿ ಕಾರ್ಯಾಚರಣೆಯ ಸಾಧ್ಯತೆ ದಟ್ಟವಾಗತೊಡಗಿತ್ತು.

ಭಾರತದೊಂದಿಗೆ ವಿಲೀನವನ್ನು ವಿರೋಧಿಸಿ ನಿಜಾಮ ವಿಶ್ವಸಂಸ್ಥೆಗೆ ದೂರನ್ನೊಯ್ದ. ಅಮೆರಿಕಾದ ಅಂದಿನ ಅಧ್ಯಕ್ಷರಾಗಿದ್ದ ಹ್ಯಾರಿ ಟ್ರೂಮನ್‌ರ ಮಧ್ಯಸ್ತಿಕೆ ಕೋರಿ ಪತ್ರವನ್ನೂ ಬರೆದಿದ್ದ. ಏತನ್ಮಧ್ಯೆ ಹೈದರಾಬಾದಿನ ಜನಜೀವನ ಪೂರ್ತಿ ಹಳಿತಪ್ಪಿತ್ತು. ನಡುರಾತ್ರಿಯಲ್ಲಿ ಪಾಕಿಸ್ತಾನದ ಯುದ್ಧವಿಮಾನಗಳು ಬೀದರ್, ವಾರಂಗಲ್ ಮುಂತಾದೆಡೆ ಇಳಿದು ಶಸ್ತ್ರಾಸ್ತ್ರಗಳನ್ನು, ಯುದ್ಧಸಾಮಗ್ರಿಗಳನ್ನು ರಜಾಕಾರ ಪಡೆಗಳಿಗೆ ಒದಗಿಸಿ ಮರಳುತ್ತಿದ್ದವು. ರಜಾಕಾರರು ಮತ್ತು ಕಮ್ಯೂನಿಸ್ಟರ ಮಧ್ಯೆ ದುಷ್ಟಕೂಟವೇರ್ಪಟ್ಟು ಹಿಂದುಗಳ ಮೇಲೆ ದಬ್ಬಾಳಿಕೆ, ಹಿಂಸೆಗಳ ಕಂಡರಿಯದ ಸರಣಿ ತಾಂಡವವಾಡತೊಡಗಿತು. ಇಷ್ಟೆಲ್ಲಾ ಘಟನೆಗಳು ನಡೆದಿದ್ದರೂ ಪ್ರಧಾನಿ ನೆಹರು ಮಾತ್ರ 1948 ಸೆಪ್ಟೆಂಬರ್ 8 ರ ಸಂಪುಟ ಸಭೆಯಲ್ಲಿ ನಿಜಾಂ ಸರ್ಕಾರದ ವಿರುದ್ಧ ಸೇನಾ ಕಾರ್ಯಾಚರಣೆಯನ್ನು ವಿರೋಧಿಸಿದರು ಮತ್ತು ಹಾಗೆ ವಿರೋಧಿಸಿದ ಸಭೆಯ ಏಕಮಾತ್ರ ಸದಸ್ಯ ಅವರಾಗಿದ್ದರು! ಬಂದ ಕಂಟಕಗಳನ್ನೆಲ್ಲ ಪಟೇಲ್ ಚಾಣಾಕ್ಷತನದಿಂದ ಪರಿಹರಿಸಿ ಸೆಪ್ಟೆಂಬರ್ 13 ರ ಬೆಳಿಗ್ಗೆ ಕಾರ್ಯಾಚರಣೆ ಶುರುವಾಗುವಂತೆ ನೋಡಿಕೊಂಡರು. ದೆಹಲಿಯ ಕೆಂಪುಕೋಟೆಯ ಮೇಲೆ ಇಸ್ಲಾಮೀ ಧ್ವಜವನ್ನು ಹಾರಿಸುವ ಕನಸು ಕಾಣುತ್ತಿದ್ದ ರಜಾಕಾರರ ಪಡೆ ಭಾರತೀಯ ಸೈನ್ಯದೆದುರು 5 ದಿನಗಳಲ್ಲೇ ಪತನ ಕಾಣುವುದರೊಂದಿಗೆ ವಿಧ್ಯುಕ್ತವಾಗಿ 1948 ಸೆಪ್ಟೆಂಬರ್ 17 ರಂದು ಹೈದರಾಬಾದ್ ಸಂಸ್ಥಾನ ಭಾರತದ ಅವಿಭಾಜ್ಯ ಭಾಗವಾಯಿತು.

> **“1938ರಷ್ಟು ಹಿಂದೆಯೇ ನಾಗಪುರದಲ್ಲಿ ನಡೆದ ಹಿಂದೂ ಮಹಾಸಭಾದ ವಾರ್ಷಿಕ ಅಧಿವೇಶನದಲ್ಲಿ ನಿಜಾಂಶಾಹಿಯ ವಿರುದ್ಧ ವ್ಯಾಪಕ ಜನಾಂದೋಲನ ನಡೆಸಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ಕಾರ್ಯಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಹಿಂದೂ ಮಹಾಸಭಾ ತಮ್ಮ 5,000 ಸತ್ಯಾಗ್ರಹಿಗಳನ್ನು ಸಜ್ಜುಗೊಳಿಸಿ ಕಳುಹಿಸಿದವು. ಆ ವೇಳೆಗೇ ಹೈದ್ರಾಬಾದ್ ಸಂಸ್ಥಾನದಲ್ಲಿ ಸಂಘರ್ಷವನ್ನು ಆರಂಭಿಸಿದ್ದ ಆರ್ಯಸಮಾಜ ತನ್ನ 10,000 ಕಾರ್ಯಕರ್ತರನ್ನು ತೊಡಗಿಸಿತ್ತು.”**

ಆದರೆ, ಹೈದರಾಬಾದ್ ಮುಕ್ತಿ ಚಳುವಳಿ ಬರಿಯ ರಾಜಕೀಯ ಹೋರಾಟದ ಪರಿಣಾಮವಲ್ಲ. 1 ಕೋಟಿ 63 ಲಕ್ಷ ಜನಸಂಖ್ಯೆಯ ರಾಜ್ಯದಲ್ಲಿ 86% ರಷ್ಟು ಜನ ಹಿಂದೂ ಬಹುಸಂಖ್ಯಾತರ ಮೇಲೆ ಮತಾಂಧ ರಾಜನೊಬ್ಬನ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಮೊದಲಾದ ಎಲ್ಲ ರೀತಿಯ ದುರಾಡಳಿತದಲ್ಲಿ ಒತ್ತೆಯಾಳುಗಳ ಪಾಡನ್ನನುಭವಿಸಿದ ಸಾಮಾನ್ಯರ ಆಶಾಕಿರಣವಾಗಿ ಹೊಮ್ಮಿದ್ದು ಹಿಂದೂ ಸಂಘಟನೆಗಳು ಮಾತ್ರ. ಅದರಲ್ಲೂ ಪ್ರಮುಖವಾಗಿ ಆರ್ಯಸಮಾಜ, ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಕಾರ್ಯಕರ್ತರ ನಿರ್ಭೀತ ಬಲಿದಾನಗಳೇ ಅತ್ಯಂತ ವಿಷಮ ಪರಿಸ್ಥಿತಿಯಲ್ಲಿಯೂ

ಸ್ವಾತಂತ್ರ್ಯಕ್ಕಾಗಿ ತಮ್ಮ ಹೋರಾಟವನ್ನು ಮುಂದುವರೆಸಲು ಅಲ್ಲಿನ ಪ್ರಜೆಗಳ ಪ್ರೇರಣಾದಾಯಕವಾಗಿದ್ದವು.

- ನಿಜಾಂ ರಾಜ್ಯದ ಸರ್ಕಾರಿ ಕಾರ್ಯಕ್ರಮವಾಗಿದ್ದ ಸಂಪೂರ್ಣ ಇಸ್ಲಾಮಿ ಆಸಫಿಯಾ ರಾಜ್ಯಸ್ಥಾಪನೆಗೆ ಕೊಡಲಿಪೆಟ್ಟು ಕೊಟ್ಟಿದ್ದು ಆರ್ಯಸಮಾಜದ ವೀರ ಕಾರ್ಯಕರ್ತರು ಮತ್ತು ಸಂನ್ಯಾಸಿಗಳು. ಆರ್ಯಸಮಾಜದ ಪ್ರಭಾವಿ ಕಾರ್ಯಕ್ರಮಗಳಿಂದ ಕಂಗಾಲಾಗಿದ್ದ ನಿಜಾಮ, ಸಮಾಜದ ಧಾರ್ಮಿಕ ಕಾರ್ಯಕ್ರಮ, ಓಂಕಾರದ ಧ್ವಜ, ಹೋಮ-ಹವನಗಳನ್ನೂ ಸಂಪೂರ್ಣವಾಗಿ ನಿಷೇಧಿಸಿದ್ದ. ಬುದ್ಧಿಬಲದ ಜೊತೆಗೆ ಕ್ಷಾತ್ರಭಾವವನ್ನು ಉದ್ದೀಪಿಸಲು ಸಮಾಜದ ಕಾರ್ಯಕರ್ತರು ದಂಡ-ಬೈಠಕ್, ಮಲ್ಲಕಂಬ, ಯೋಗಾಸನ, ಆತ್ಮರಕ್ಷಣೆ ಮತ್ತು ಹೋರಾಟದ ಪ್ರಶಿಕ್ಷಣವನ್ನೂ ಕೊಡುತ್ತಿದರು.
- ಔರಂಗಾಬಾದ್ ಜಿಲ್ಲೆಯ ನೆವುರ್ಗಾಂವ್ ನಲ್ಲಿ ಪ್ರಹ್ಲಾದ್ ಅಭಯಂಕರ್ ಎಂಬುವರು ಸಂಘದ ಆದೇಶದಂತೆ ವೈಯಕ್ತಿಕ ನೆಲೆಯಲ್ಲಿ ಅಪಾರ ಸಂಖ್ಯೆಯ ಕಾರ್ಯಕರ್ತರೊಂದಿಗೆ 1938ರ ಚಳುವಳಿಯಲ್ಲಿ ಭಾಗವಹಿಸಿ ಹಿಂದುಶಕ್ತಿಯ ಪ್ರಭಾವಿ ಪ್ರದರ್ಶನ ಮಾಡಿಸಿದರು. ಈ ಆಂದೋಲನ ಸರಣಿಯ ಪರಿಣಾಮವಾಗಿ ನಿಜಾಂ ಸರ್ಕಾರ ಕೆಲವು ರಾಜಕೀಯ ಸುಧಾರಣೆಗಳನ್ನು ಘೋಷಿಸಿತು.
- ಔರಂಗಾಬಾದ್ ಜಿಲ್ಲೆಯ ಹಿರಿಯ ಸ್ವಯಂಸೇವಕ ದತ್ತೋಪಂತ್ ದೇಶಪಾಂಡೆಯವರಿಗೆ ನಿಜಾಂ ರಾಜ್ಯದಲ್ಲಿ ಹಿಂದುಗಳ ಮೇಲಾಗುತ್ತಿದ್ದ ಮತೀಯ ಆಕ್ರಮಣವನ್ನು ತಡೆಯಲು ನಿತ್ಯಶಾಖೆ, ಉತ್ಸವ ಮತ್ತು ಕಾರ್ಯಕ್ರಮಗಳನ್ನು ವ್ಯಾಪಕವಾಗಿ ನಡೆಸುವಂತೆ ನಿಯೋಜಿಸಲಾಗಿತ್ತು. ದ. ಮಾ. ದೇಶಮುಖ್ ಮತ್ತು ದ. ಗ. ದೇಶಪಾಂಡೆ ಇವರನ್ನು ಸಂಘದ ಸರಸಂಘಚಾಲಕರಾಗಿದ್ದ ಶ್ರೀ ಗುರೂಜಿಯವರೇ ಹಿಂದುಗಳ ಸಂಘಟನೆಗೆ ನಿಯೋಜಿಸಿ ಹೈದ್ರಾಬಾದಿಗೆ ಕಳುಹಿಸಿದ್ದರು.
- ಹೈದರಾಬಾದ್, ಸೋಲಾಪುರ್, ತುಳಜಾಪುರ್, ಉಮರ್ಗಾ, ನಳದುರ್ಗ, ಬೀದರ್, ಕಲ್ಬುರ್ಗಿ ಮುಂತಾದ ಜಿಲ್ಲೆಗಳಲ್ಲಿ ಸಂಘದ ಪ್ರಚಾರಕರು ಮತ್ತು ಹಿರಿಯ ಕಾರ್ಯಕರ್ತರು ಗುಪ್ತವಾಗಿ ಹಿಂದು ಜಾಗರಣ ಅಭಿಯಾನದಲ್ಲಿ ತೊಡಗಿರುತ್ತಿದ್ದರು. ಗಣೇಶೋತ್ಸವ, ದಸರಾ ಮುಂತಾದ ಹಬ್ಬಗಳ ಸಂದರ್ಭದಲ್ಲಿ ಇವರು ಆಕ್ರಮಕ ರಜಾಕಾರರನ್ನು ಎದುರಿಸುವ ಕುರಿತು ಚರ್ಚಿಸುತ್ತಿದ್ದರು.
- ಹೈದರಾಬಾದ್ ಸಮಸ್ಯೆಯ ಪರಿಹಾರಕ್ಕೆ ಡಾ. ಅಂಬೇಡ್ಕರ್ ಅವರ ಕೊಡುಗೆಯೂ ಮಹತ್ವದ್ದಾಗಿದೆ. ಹೈದರಾಬಾದಿನ ಮುಕ್ತಿಗೆ ಸೈನ್ಯವನ್ನು ಅವಲಂಬಿಸಬೇಕಾಗಿದ್ದರೂ ಅದನ್ನು 'ಪೋಲಿಸ್ ಕಾರ್ಯಾಚರಣೆ' ಎಂದು ಕರೆಯಲು ಅಂಬೇಡ್ಕರ್ ಸೂಚಿಸಿದಾಗ ಸಚಿವ ಸಂಪುಟದ ಎಲ್ಲ ಸದಸ್ಯರೂ ಅದನ್ನು ಸ್ವಾಗತಿಸಿದರು. ಆಂತರಿಕ ಗಲಭೆಯನ್ನು ಹತ್ತಿಕ್ಕಲು ಸೈನ್ಯದ ಬಳಕೆಯಾದರೂ ಅದಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಗಬಹುದಾದ ಮುಜುಗರವನ್ನು ತಪ್ಪಿಸಿದ ಶ್ರೇಯ, ವ್ಯಾವಹಾರಿಕ ಪರಿಜ್ಞಾನ ಬಾಬಾಸಾಹೇಬರದ್ದು.

ಲೇಖಕ: ಶೈಲೇಶ್ ಕುಲಕರ್ಣಿ

## ಬಯಲುಶೌಚ ಮುಕ್ತ ಭಾರತ



ಸ್ವಚ್ಛ ಭಾರತ ಮಿಷನ್ ಹಾಗೂ ನಮಾಮಿ ಗಂಗೆಯೋಜನೆ ಅಡಿಯಲ್ಲಿ 2019ರ ವೇಳೆಗೆ ಭಾರತವನ್ನು ಬಯಲುಶೌಚ ಮುಕ್ತವನ್ನಾಗಿಸಲು ಪ್ರಯತ್ನಗಳು ನಡೆಯುತ್ತಿವೆ. ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯದ ವರದಿ ಪ್ರಕಾರ, 2019ರ ವೇಳೆಗೆ 9.8 ಕೋಟಿ ಮನೆಗಳಲ್ಲಿ ಶೌಚಗೃಹ ನಿರ್ಮಿಸುವ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ಅಂದರೆ ದಿನವೊಂದಕ್ಕೆ 67,000 ಹಾಗೂ ಪ್ರತಿ ನಿಮಿಷಕ್ಕೆ 46ಶೌಚಗೃಹ ನಿರ್ಮಿಸುವ ಅಸಾಧ್ಯ ಗುರಿ. 2014-15ನೇ ಹಣಕಾಸು ವರ್ಷದಲ್ಲಿ ಪ್ರತಿನಿಮಿಷಕ್ಕೆ 11ಶೌಚಗೃಹ ನಿರ್ಮಾಣವಾಗಿವೆ. ಈ ವೇಗದಲ್ಲಿ ಹೋದರೆ 2032ರ ಹೊತ್ತಿಗೆ ಗುರಿಸಾಧಿಸಲಾದೀತಷ್ಟೆ. ಆದರೆ, ಕಳೆದ ವರ್ಷದಿಂದೀಚೆಗೆ ಈ ಕೆಲಸಕ್ಕೆ ವೇಗ ಸಿಕ್ಕಿದ್ದು, ರಾಜ್ಯಗಳ ಪೈಕಿ ಸಿಕ್ಕಿಂ ಈಗಾಗಲೇ ಶೌಚಗೃಹ ನಿರ್ಮಾಣದಲ್ಲಿ ಶೇ. 100ರ ಪ್ರಗತಿ ದಾಖಲಿಸಿದೆ. ನಂತರದ ಸ್ಥಾನದಲ್ಲಿ ಹಿಮಾಚಲ ಪ್ರದೇಶ, ಕೇರಳ, ಹರಿಯಾಣ ಮತ್ತು ಉತ್ತರಾಖಂಡಗಳಿವೆ.

## ಕೇರಳದಲ್ಲಿ ಐಸಿಸ್ ರಹಸ್ಯ ಪಾಠ!

ಐಸಿಸ್(ಇಸ್ಲಾಮಿಕ್ ಸ್ಟೇಟ್) ಉಗ್ರ ಸಂಘಟನೆಯು ತನ್ನ ಜಿಹಾದಿ ತತ್ವ ಸಿದ್ಧಾಂತಗಳನ್ನು ಪ್ರಚಾರ ಮಾಡುವ ಸಲುವಾಗಿ ಕೇರಳದಲ್ಲಿ ರಹಸ್ಯ ತರಗತಿಗಳನ್ನು ನಡೆಸುತ್ತಿರುವ ವಿಷಯವನ್ನು ಇತ್ತೀಚೆಗೆ ಐಸಿಸ್ ಚಟುವಟಿಕೆಯಲ್ಲಿ ತೊಡಗಿ ಬಂಧನಕ್ಕೊಳಗಾದ ಶಿಕ್ಷಕಿ ಯಾಸ್ಮಿನ್ ಅಹ್ಮದ್ ಬಾಯಿಬಿಟ್ಟಿದ್ದಾಳೆ.

ದೇಶದಲ್ಲಿ ನೆಲೆ ವಿಸ್ತರಿಸಿಕೊಳ್ಳಲು ಐಸಿಸ್ ಅನೇಕ ರೀತಿಯಲ್ಲಿ ಪ್ರಯತ್ನಿಸುತ್ತಿದೆ. ಉಗ್ರ ಸಿದ್ಧಾಂತ ಬೋಧನೆ ಮಾಡುವುದು ಇಂತಹ ತಂತ್ರಗಳ ಪೈಕಿ ಒಂದು. ಸುಮಾರು 40 ಜನರಿಗೆ ಐಸಿಸ್ ಸಂಘಟನೆಯು ಕ್ಲಾಸ್‌ಗಳನ್ನು ನಡೆಸಿ ಜಿಹಾದಿ ತತ್ವಗಳನ್ನು ತಲೆಗೆ ತುರುಕಿದೆ ಎಂದು ಯಾಸ್ಮಿನ್ ತನಿಖಾಧಿಕಾರಿಗಳಿಗೆ ತಿಳಿಸಿದ್ದಾಳೆ. ಯಾಸ್ಮಿನ್ ಮತ್ತು ಆಕೆಯ ಗಂಡ ಇಬ್ಬರೂ ಕೇರಳದ ಶಾಲೆಯಲ್ಲಿ ಶಿಕ್ಷಕರಾಗಿದ್ದರು. ಐಸಿಸ್ ಕುರಿತು ಯಾಸ್ಮಿನ್ ಹಲವು ಮಾಹಿತಿಗಳನ್ನು ಬಾಯಿಬಿಟ್ಟಿದ್ದು, ಆಕೆಯ ಹೇಳಿಕೆ, ಚಲನವಲನಗಳ ಮೇಲೆ ಪೊಲೀಸರು ಕಣ್ಣಿಟ್ಟಿದ್ದಾರೆ.

## ಆರೆಸ್ಸೆಸ್ ಗಣವೇಷ ವಿಜಯದಶಮಿಯಿಂದ ಜಾರಿಗೆ



ರಾಷ್ಟ್ರೀಯ ಸ್ವಯಂಸೇವಕ ಸಂಘದ ಗಣವೇಷದಲ್ಲಿ ಬದಲಾವಣೆಯಾಗಿದ್ದು, ಇದು ವಿಜಯದಶಮಿ ದಿನದಿಂದ ಜಾರಿಗೆ ಬರಲಿದೆ ಕರ್ನಾಟಕ ಸೇರಿದಂತೆ ದೇಶದಾದ್ಯಂತ ಸಂಘ ವಸ್ತು ಭಂಡಾರಗಳಲ್ಲಿ ಇದರ ಮಾರಾಟ ಈಗಾಗಲೇ ಪ್ರಾರಂಭವಾಗಿದೆ.

ಕಳೆದ(2016) ಮಾರ್ಚ್ 13ರಂದು ರಾಜಸ್ಥಾನದ ನಾಗೂರ್‌ನಲ್ಲಿ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ನೀತಿ ನಿರ್ಧಾರಗಳನ್ನು ನಿರೂಪಿಸುವ ಮಹತ್ವದ ವಾರ್ಷಿಕ ಸಭೆ ಅಖಿಲ ಭಾರತೀಯ ಪ್ರತಿನಿಧಿ ಸಭಾ(ABPS)ದಲ್ಲಿ ಗಣವೇಶ ಬದಲಾವಣೆಯ ನಿರ್ಣಯ ಕೈಗೊಳ್ಳಲಾಗಿತ್ತು. ಸಂಘ ಸ್ವಯಂಸೇವಕರಿಗೆ ಪಾರಂಪರಿಕ ಖಾಕಿ ಚೆಡ್ಡಿ ಬದಲಾಗಿ ಇನ್ನು ಸೊಂಟದಿಂದ ಪಾದದವರೆಗೆ ಮುಚ್ಚುವ ಕಂದು ಬಣ್ಣದ ಪ್ಯಾಂಟ್ ಸಮವಸ್ತ್ರವಾಗಿರಲಿದೆ. ಉಳಿದಂತೆ ಬಿಳಿ ಅಂಗಿ, ಕಪ್ಪು ಟೋಪಿ, ಕಂದು ಸಾಕ್ಸ್ ಮತ್ತು ದಂಡ (ಬಿದಿರಿನ ಬೆತ್ತ) ಎಂದಿನಂತೆ ಗಣವೇಷದ ಭಾಗವಾಗಿರಲಿದೆ. ವಿಶೇಷವಾಗಿ ಈಶಾನ್ಯ ಸೇರಿದಂತೆ ದೇಶದ ಎಲ್ಲ ಭಾಗಗಳ ಹವಾಮಾನ, ಪರಿಸರ ಇತ್ಯಾದಿ ಅಂಶಗಳನ್ನು ಪರಿಗಣಿಸಿ ವ್ಯಾಪಕವಾಗಿ ಚರ್ಚೆ, ಸಮಾಲೋಚನೆ, ಚಿಂತನೆ ನಡೆಸಿ ಈ ನಿರ್ಧಾರ ಕೈಗೊಳ್ಳಲಾಗಿತ್ತು.

# ಗಂಜಲ ಬಳಸಿ-ಭೂಸಾರ ಉಳಿಸಿ

ನೆಲದ ಮಾತು

ಗಂಜಲದ ಹಕ್ಕು ಸ್ವಾಮ್ಯಕ್ಕೆ (ಪೇಟೆಂಟ್) ಅಮೆರಿಕ ವಿಶ್ವಮಟ್ಟದಲ್ಲಿ ಹೋರಾಟ ನಡೆಸಿದರೂ ವಿಫಲವಾಗಿದೆ. ಆದರೆ ನಮ್ಮಲ್ಲೇ ಇರುವ ಗಂಜಲವನ್ನು ವ್ಯರ್ಥ ಮಾಡುವವರೇ ಹೆಚ್ಚು. ಮಣ್ಣು ಹಾಗೂ ಜನರ ಆರೋಗ್ಯ ಕಾಪಿಡುವ ಗಂಜಲದ ಕುರಿತು ಇನ್ನಷ್ಟು ತಿಳಿವಳಿಕೆ ಮೂಡಬೇಕಿದೆ...

ಕೃಷಿಯಲ್ಲಿ ಗಂಜಲದ ಬಳಕೆ ಹೊಸದೇನಲ್ಲ. ಇದು ಬಹುತೇಕರಿಗೆ ತಿಳಿದ ವಿಷಯ. ಹೀಗಿದ್ದರೂ ನಮ್ಮಲ್ಲಿ ಗಂಜಲ ವ್ಯರ್ಥವಾಗುವುದೇ ಹೆಚ್ಚು. ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಗಂಜಲವನ್ನು ಪ್ರತಿ ನಿತ್ಯ ಚರಂಡಿಗೆ ಚೆಲ್ಲಲಾಗುತ್ತಿದೆ.

ದೇಸೀ ಹಸುವಿನ ಗಂಜಲಕ್ಕೆ ಸಿಮೀತವಾಗದೇ ಎಲ್ಲಾ ಬಗೆಯ ಜಾನುವಾರುಗಳ ಗಂಜಲದ ಬಳಕೆ ಅನಿವಾರ್ಯ. ದೇಸೀ ಹಸುವಿನ ಗಂಜಲ ಬಹಳ ಒಳ್ಳೆಯದು, ಇದ್ದರೆ ಖಂಡಿತ ಬಳಸಿ. ಸಾಕಲು ಮತ್ತು ಖರೀದಿಸಲು ಶಕ್ತರಾದವರು ದೇಸೀ ಹಸುಗಳನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಿ. ಇಲ್ಲವಾದರೆ ಇತರೆ ರಾಸುಗಳ ಗಂಜಲವನ್ನು ಸಂಗ್ರಹಿಸಿ. 25 ಎಕರೆಗೆ ಬೇಕಾಗುವಷ್ಟು ಪೋಷಕಾಂಶವನ್ನು ಕೇವಲ ಒಂದು ಹಸುವಿನಿಂದ ಪಡೆಯಬಹುದು ಎಂಬ ನೈಸರ್ಗಿಕ ಕೃಷಿಕ ಸುಭಾಷ್ ಪಾಳೇಕಾರ್ ಅವರ ಮಾತು ಅಕ್ಷರಶಃ ಸತ್ಯ.

ಗಂಜಲದಲ್ಲಿ ದೊಡ್ಡ ಪ್ರಮಾಣದ ಯೂರಿಕ್ ಆಮ್ಲ ಇದೆ. ಸಾವಿರಾರು ರೂಪಾಯಿ ಖರ್ಚು ಮಾಡಿ ಕೃತಕ ಯೂರಿಯಾ ಗೊಬ್ಬರ ಬಳಸುವುದಕ್ಕಿಂತ ಗಂಜಲ ಬಳಸುವುದು ಅತಿ ಸೂಕ್ತ. ಮಣ್ಣಿನ ಫಲವತ್ತತೆ ಹೆಚ್ಚಿಸಲು ಕುರಿ ಮಂದೆಗಳನ್ನು ಹೊಲದಲ್ಲಿ ನಿಲ್ಲಿಸಿಕೊಂಡಿರುತ್ತಾರೆ. ಆದರೆ ಮನೆಯಲ್ಲಿ ಸಿಗುವ ಗಂಜಲವನ್ನು ಚರಂಡಿ ಪಾಲು ಮಾಡುತ್ತಾರೆ.

ಪಂಚಗವ್ಯ, ಬೀಜಾಮೃತ, ಜೀವಾಮೃತ, ತ್ರಿಮೂರ್ತಿ ಟಾನಿಕ್ ಹಾಗೂ ಪೂಂಚಿಮರಂದು ತಯಾರಿಕೆಯಲ್ಲಿ ಗಂಜಲ ಒಂದು ಪ್ರಮುಖ ಅಂಶ. ಸಾವಯವ ಕೃಷಿಯಲ್ಲಿ ಜೀವಾಮೃತ ಹಾಗೂ ಪಂಚಗವ್ಯದ ಬಳಕೆ ಹೆಚ್ಚಾಗಿದೆ. ಗಂಜಲ ಕೃಷಿಗೆ ಸೀಮಿತವಾಗದೇ ಮಾನವರ ಆರೋಗ್ಯ ಕಾಪಾಡುವಲ್ಲೂ ಪ್ರಮುಖ ಪಾತ್ರ ವಹಿಸಿದೆ. ಹಸುವಿನ ಗಂಜಲ 'ಅರ್ಕ' ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಕೆಯಲ್ಲಿದೆ.

ಔಷಧೀಯ ಗುಣಗಳು: ಗಂಜಲದಲ್ಲಿ ಹಲವಾರು ರೀತಿಯ ಪೋಷಕಾಂಶಗಳಿವೆ. ಜೀವಚೈತನ್ಯ ನೀಡುವ ಕಿಣ್ವಗಳು ಹಾಗೂ ಜೀವಸತ್ವಗಳು ಇವೆ. ಗಂಜಲದಲ್ಲಿ ಶೇಕಡ 95ರಷ್ಟು ನೀರು, ಶೇಕಡ 2.5ರಷ್ಟು ಯೂರಿಯಾ ಹಾಗೂ ಶೇಕಡ 2.5ರಷ್ಟು ಸತ್ವ, ಕಿಣ್ವ, ಉಪ್ಪು, ಖನಿಜಗಳು ಇವೆ.

ಸಾರಜನಕದ ಅಂಶ ಪ್ರತಿ ಲೀಟರ್ ಗಂಜಲದಲ್ಲಿ 6.8-21.6 ಗ್ರಾಂ ಇದೆ. ನಿಯಮಿತವಾಗಿ ಗಂಜಲವನ್ನು ಬೆಳೆಗಳಿಗೆ ಬಳಸಿದರೆ ಕಡಿಮೆ ಖರ್ಚಿನೊಂದಿಗೆ, ಅಧಿಕ ಇಳುವರಿ ಪಡೆಯಬಹುದು. ಆಧುನಿಕ ಕೃಷಿ ವ್ಯವಸ್ಥೆ ಅಡಿಯಲ್ಲಿ ಇದರ ಮಹತ್ವ ಸಂಪೂರ್ಣ ತಿರಸ್ಕಾರಗೊಂಡಿದೆ. ಆಧುನಿಕ ಕೃಷಿ ಉತ್ಪನ್ನಗಳಾದ ರಾಸಾಯನಿಕ ಗೊಬ್ಬರಗಳು, ಪೀಡೆನಾಶಕಗಳು ಹಾಗೂ ಕಳೆನಾಶಕಗಳು ಲಗ್ಗೆ ಇಟ್ಟವು.

ಗಂಜಲ ಕೇವಲ ಪೋಷಕಾಂಶ ಅಲ್ಲ; ಬದಲಾಗಿ ಶಿಲೀಂಧ್ರನಾಶಕ, ಕಳೆನಾಶಕವಾಗಿ ಕೆಲಸ ಮಾಡುತ್ತದೆ. ನಾಚಿಕೆಮುಳ್ಳು ನಿಯಂತ್ರಿಸಲು ಗಂಜಲ ಬಳಸುತ್ತಾರೆ. ಜ್ವರ ಗುಣಪಡಿಸಲು ಗಂಜಲದೊಂದಿಗೆ ಕಾಳುಮೆಣಸು, ಮೊಸರು ಹಾಗೂ ತುಪ್ಪ ಬೆರೆಸಿ ಕೊಡುತ್ತಾರೆ.

ರಕ್ತಹೀನತೆ ಹೋಗಲಾಡಿಸಲು ಗಂಜಲ, ತ್ರಿಫಲ ಚೂರ್ಣ, ಹಸುವಿನ ಹಾಲಿನೊಂದಿಗೆ ಮಿಶ್ರಣ ಮಾಡಿ ಕೊಡುತ್ತಾರೆ.

ಕುಷ್ಠರೋಗ ತಡೆಗಟ್ಟಲು ಗಂಜಲ, ವಾಸಕ ಎಲೆ, ಕುರೇಲ್ಲಾ ಚಕ್ಕೆಯೊಂದಿಗೆ ಬೆರೆಸಿ ಕೊಡುತ್ತಾರೆ.

### ರೈತರ ಅನುಭವದ ಮಾತು

ಎತ್ತಿನ ಗಂಜಲದಿಂದ ಜೋಳಕ್ಕೆ ಬರುವ ಕಾಡಿಗೆ ರೋಗವನ್ನು ನಿಯಂತ್ರಿಸಬಹುದು. ಜೋಳದ ಕಾಳಿಗೆ ಕಾಡಿಗೆ ತಾಗಿದರೆ ತಿನ್ನಲಿಕ್ಕೆ ಬರುವುದಿಲ್ಲ. ಬಿತ್ತನೆ ಬೀಜಗಳನ್ನು ಎತ್ತಿನ ಗಂಜಲದಲ್ಲಿ 2 ನಿಮಿಷ ನೆನೆಸಿ ಕೂಡಲೇ ನೆರಳಲ್ಲಿ ಒಣಗಿಸಬೇಕು. ಆನಂತರ ಆ ಬೀಜಗಳನ್ನು ಬಿತ್ತಬೇಕು ಎಂಬುದು ನವಲಗುಂದದ ರೈತ ಭೀಮರೆಡ್ಡಿ ಅನುಭವದ ಮಾತು.

ಗಂಜಲದೊಂದಿಗೆ ಸೆಗಣಿ ಮಿಶ್ರಣ ಮಾಡಿ ಹತ್ತಿ ಎಲೆಗೆ ಸಿಂಪರಣೆ ಮಾಡಿದರೆ ಸಂಪೂರ್ಣವಾಗಿ ಹತ್ತಿ ಎಲೆ ಸುರಳಿಪೂಚಿ ರೋಗವನ್ನು ನಿಯಂತ್ರಿಸಬಹುದು ಎನ್ನುತ್ತಾರೆ ಶಿಗ್ಗಾಂವನ ಕಂಕಣವಾಡ ಗ್ರಾಮದ ಸಿ.ಡಿ ಪಾಟೀಲ್.


ಗೋಧಿ ಹೊಲದಲ್ಲಿ ಕಾಡುವ ಗೆದ್ದಲಿನ ಕಾಟಕ್ಕೆ ಕತ್ತೆಯ ಗಂಜಲ ಉತ್ತಮ. ಗೋಧಿ ಬಿತ್ತನೆ ಬೀಜಗಳನ್ನು ಬಿತ್ತನೆಗೆ ಮೊದಲು ಕತ್ತೆಯ ಗಂಜಲದಲ್ಲಿ ನೆನೆಸಬೇಕು. ಬಿತ್ತನೆ ಬೀಜಗಳನ್ನು ಕತ್ತೆ ಗಂಜಲದಲ್ಲಿ ಎರಡು ನಿಮಿಷ ನೆನೆಸಿ ಕೂಡಲೇ ನೆರಳಲ್ಲಿ ಒಣಗಿಸಬೇಕು. ನಂತರ ಆ ಬೀಜಗಳನ್ನು ಬಿತ್ತಬೇಕು ಎನ್ನುವುದು ಗುಜರಾತಿನ ಸಬರಕಾಂತ ಜಿಲ್ಲೆಯ ಧನಬಾಯಿ ಕೀಮಾಭಾಯಿ ಅವರ ಅನುಭವ.

ಯಾವುದೇ ಬೀಜವನ್ನು ಎಮ್ಮೆಯ ಗಂಜಲದಲ್ಲಿ ಎರಡು ನಿಮಿಷ ನೆನೆಸಿ ಕೂಡಲೇ ನೆರಳಲ್ಲಿ ಒಣಗಿಸಬೇಕು. ಈ ರೀತಿ ಬೀಜೋಪಚಾರ ಮಾಡಿದ ಬೀಜವನ್ನು ಬಿತ್ತಿದರೆ ಅದು ಶಕ್ತಿಭರಿತವಾಗಿ ಬೇಗನೆ ಮೊಳಕೆ ಬರುವುದು.

ಸಂಪಾದಕೀಯ ಸಹಕಾರ ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ಪಾಕಿಸ್ತಾನದಿಂದ ದೌರ್ಜನ್ಯಕ್ಕೊಳಗಾದ ಬಲೂಚಿಸ್ತಾನದ ಜತೆ ಸಂಬಂಧ ಉತ್ತಮ ಪಡಿಸಿಕೊಳ್ಳಲು ಮೋದಿ ಸರ್ಕಾರ ಮತ್ತೊಂದು ಕ್ರಮ ಕೈಗೊಂಡಿದೆ. ಆಲ್ ಇಂಡಿಯಾ ರೇಡಿಯೋ (ಎಐಆರ್)ದಲ್ಲಿ ಬಲೂಚ್ ಭಾಷೆಯಲ್ಲಿ ವಾರ್ತೆ ಮತ್ತು ಇತರ ಕಾರ್ಯಕ್ರಮ ಪ್ರಸಾರ ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಕುರಿತಂತೆ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಆಲ್ ಇಂಡಿಯಾ ರೇಡಿಯೋ ನಿರ್ದೇಶಕರೊಂದಿಗೆ ಮಾತುಕತೆ ನಡೆಸಿದ್ದಾರೆ. ಆಲ್ ಇಂಡಿಯಾ ರೇಡಿಯೋದ ವಿದೇಶಾಂಗ ಸೇವೆಗಳ ವಿಭಾಗ ಶೀಘ್ರದಲ್ಲೇ ಬಲೂಚ್ ಭಾಷೆಯ ಪ್ರಸಾರ ಆರಂಭಿಸಲಿದೆ. ಇದು ಜಮ್ಮು–ಕಾಶ್ಮೀರ ರೇಡಿಯೋ ಕೇಂದ್ರದಿಂದ ಪ್ರಸಾರಗೊಳ್ಳಲಿದೆ. ಜಮ್ಮು–ಕಾಶ್ಮೀರದ ಎಐಆರ್ ಸಂಕೇತಗಳ ಸಾಮರ್ಥ್ಯ ಹೆಚ್ಚಿಸಿದ್ದು, 300 ಕೆ.ವಿ ಸಾಮರ್ಥ್ಯದ ಡಿಜಿಟಲ್ ರೇಡಿಯೊ ಟ್ರಾನ್ಸ್‌ಮಿಟರ್ ಅನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ಆಕಾಶವಾಣಿಯ ಕಾರ್ಯಕ್ರಮಗಳನ್ನು ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಬಲೂಚಿಸ್ತಾನ ಸೇರಿದಂತೆ ಪಾಕಿಸ್ತಾನದ ಹಲವು ಭಾಗಗಳಲ್ಲಿ ಕೇಳಬಹುದಾಗಿದೆ.

## ತಾಲೂಕು ಕೇಂದ್ರದಲ್ಲಿ 'ಪ್ರಧಾನಮಂತ್ರಿ ಜನೌಷಧ ಮಳಿಗೆ'





**ಕಡಿಮೆ ದರದಲ್ಲಿ ಔಷಧ ಮಾರಾಟ ಮಾಡುವ 'ಪ್ರಧಾನಮಂತ್ರಿ ಜನೌಷಧ ಮಳಿಗೆ'ಗಳನ್ನು ಒಂದು ವರ್ಷದಲ್ಲಿ ದೇಶಾದ್ಯಂತ ಆರಂಭಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ದೇಶದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲೂ ಇಂಥ ಅಂಗಡಿಗಳನ್ನು ಸ್ಥಾಪಿಸಲಾಗುವುದು. ಇನ್ನೊಂದು ವರ್ಷದಲ್ಲಿ 3000 ಅಂಗಡಿಗಳನ್ನು ಆರಂಭಿಸಲಾಗುವುದು. ಜನೌಷಧಿ ಅಂಗಡಿಗಳಲ್ಲಿ ಸಿಗುವ ಔಷಧಿಗಳು ಇತರೆಡೆಗಳಿಗಿಂತ ಗರಿಷ್ಠ ಶೇ. 70ರಷ್ಟು ಕಡಿಮೆ ಬೆಲೆಗೆ ಲಭ್ಯವಾಗಲಿದೆ ಎಂದು ಕೇಂದ್ರ ಸಚಿವ ಅನಂತಕುಮಾರ್ ತಿಳಿಸಿದ್ದಾರೆ.**



ಮುಂಬೈನ 17ರ ಹರೆಯದ ಹುಡುಗಿ ಮಾಳವಿಕಾ ರಾಜ್ ಜೋಷಿ ಬಳಿ ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿ ಪ್ರಮಾಣಪತ್ರವಿಲ್ಲ. ಆದರೆ ಅಮೆರಿಕದ ಪ್ರತಿಷ್ಠಿತ ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎಂಐಟಿ) ಕಲಿಯಲು ಅವಕಾಶ ಗಿಟ್ಟಿಸಿಕೊಂಡಿದ್ದಾಳೆ! 7ನೇ ತರಗತಿಯಲ್ಲಿ ಶಾಲೆ ಬಿಟ್ಟು ಮನೆಯಲ್ಲೇ ಕುಳಿತು ಸ್ವಪ್ರಯತ್ನದಿಂದ ಕಂಪ್ಯೂಟರ್ ಪ್ರೋಗ್ರಾಮಿಂಗ್‌ನಲ್ಲಿ ಅಪಾರ ಜ್ಞಾನ ಗಳಿಸಿ ಮಾಳವಿಕಾ ಈ ಸಾಧನೆ ಮಾಡಿದ್ದಾಳೆ. ಶಾಲೆಯಲ್ಲಿ ಕಲಿತು ಗಳಿಸುವ 'ಅಂಕ'ಕ್ಕಿಂತ 'ಯೋಗ್ಯತೆ'ಗೆ ಹೆಚ್ಚಿನ ಬೆಲೆ ಇದೆ ಎಂಬುದನ್ನು ತಾಯಿ ಮತ್ತು ಮಗಳು ತೋರಿಸಿಕೊಟ್ಟಿದ್ದಾರೆ. ಬ್ಯಾಚುಲರ್ ಆಫ್ ಸೈನ್ಸ್ ಪದವಿ ಪಡೆಯಲು ಮಾಳವಿಕಾಗೆ ಎಂಐಟಿ ವಿದ್ಯಾರ್ಥಿವೇತನ ನೀಡುತ್ತಿದೆ. ಅತ್ಯಂತ ಪ್ರತಿಷ್ಠಿತ ಪ್ರೋಗ್ರಾಮಿಂಗ್ ಸ್ಪರ್ಧೆಗಳಲ್ಲಿ ಒಂದೆನಿಸಿರುವ 'ಮಾಹಿತಿ ವಿಜ್ಞಾನ ಒಲಿಂಪಿಯಾಡ್'ನಲ್ಲಿ 3 ಪದಕ (2 ಬೆಳ್ಳಿ ಮತ್ತು ಕಂಚು) ಗೆದ್ದದ್ದರಿಂದ ಅವರಿಗೆ ಎಂಐಟಿ ಪ್ರವೇಶ ಲಭಿಸಿದೆ. ವಿವಿಧ ಒಲಿಂಪಿಯಾಡ್‌ಗಳಲ್ಲಿ (ಗಣಿತ, ಭೌತವಿಜ್ಞಾನ ಅಥವಾ ಕಂಪ್ಯೂಟರ್) ಪದಕ ಗೆದ್ದವರಿಗೆ ಕಲಿಕೆಗೆ ಅವಕಾಶ ನೀಡುವ ವ್ಯವಸ್ಥೆ ಎಂಐಟಿಯಲ್ಲಿದೆ. 3ಪದಕ ಗೆದ್ದದ್ದರಿಂದ ಮಾಳವಿಕಾಳಿಗೆ ತನ್ನ ನೆಚ್ಚಿನ ವಿಷಯ ಎನಿಸಿರುವ ಕಂಪ್ಯೂಟರ್ ಸೈನ್ಸ್‌ನಲ್ಲಿ ಸಂಶೋಧನ ನಡೆಸಲು ಅವಕಾಶ ದೊರೆತಿದೆ.

## ದೇವಸ್ಥಾನಗಳಲ್ಲಿ ಧಾರ್ಮಿಕ ಅಧ್ಯಯನ ಕೇಂದ್ರ: ಆಗ್ರಹ



**ಹಿಂದೂ ಧರ್ಮ–ಆಧ್ಯಾತ್ಮಿಕತೆ–ಸಮುದಾಯದ ಕುರಿತು ಜಾಗೃತಿ ಮೂಡಿಸಲು ಮತ್ತು ಧರ್ಮಕ್ಕೆ ಇನ್ನಷ್ಟು ಜನರನ್ನು ಆಕರ್ಷಿಸಲು ರಾಜ್ಯ ಸರ್ಕಾರದ ದೇವಸ್ಥಾನ ಮಂಡಳಿಗಳ ಆಶ್ರಯದಲ್ಲಿ ಧಾರ್ಮಿಕ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವಂತೆ ಕೇರಳದ ಬಿಜೆಪಿ ಘಟಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಧಾರ್ಮಿಕ ಅಧ್ಯಯನ ಕೇಂದ್ರಗಳನ್ನು ಆರಂಭಿಸುವುದಲ್ಲದೆ, ಧಾರ್ಮಿಕ ಸಮಾವೇಶ ಮತ್ತು ಪ್ರವಚನಗಳನ್ನೂ ನೀಡಬೇಕು ಧಾರ್ಮಿಕ ಜಾಗೃತಿ ಮೂಡಿಸುವುದು ದೇವಸ್ಥಾನ ಮಂಡಳಿಗಳ ಪ್ರಮುಖ ಆದ್ಯತೆಯಾಗಬೇಕು ಎಂದು ಪಕ್ಷದ ವಕ್ತಾರ ಎಂ.ಎಸ್. ಕುಮಾರ್ ತಿಳಿಸಿದರು.**

# ಸಾಲುದ್ದದ ಸುದ್ದಿಗಳು

## ಬಾಡಿಗೆ ತಾಯ್ತನ : ವ್ಯಾಪಾರೀಕರಣಕ್ಕೆ ಕಡಿವಾಣ

ಬಾಡಿಗೆ ತಾಯಂದಿರ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಬಾಡಿಗೆ ತಾಯ್ತನ ಕರಡು ಮಸೂದೆಗೆ ಒಪ್ಪಿಗೆ ನೀಡಿದೆ. ಬಾಡಿಗೆ ತಾಯ್ತನ ಸೆಲೆಬ್ರಿಟಿ ಸಂಸ್ಕೃತಿ ಹಾಗೂ ವೈಆಪಾರೀಕರಣಗೊಳ್ಳುತ್ತಿರುವುದನ್ನು ನಿಯಂತ್ರಿಸಲು ಈ ಮಸೂದೆ ರೂಪಿಸಿದೆ. ಈ ಮಸೂದೆಯ ಪ್ರಕಾರ ಇನ್ನು ಮುಂದೆ ಬಾಡಿಗೆ ತಾಯ್ತನವನ್ನು 'ವ್ಯಾಪಾರ' ದೃಷ್ಟಿಯಲ್ಲಿ ಬಳಸಿಕೊಳ್ಳುವಂತಿಲ್ಲ. ಸಿಂಗಲ್ ಪೇರೆಂಟ್, ಅವಿವಾಹಿತರು, ಸಲಿಂಗಿಗಳು ಬಾಡಿಗೆ ತಾಯಂದಿರ ಮೂಲಕ ಮಕ್ಕಳನ್ನು ಪಡೆಯುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಬಾಡಿಗೆ ತಾಯಂದಿರ ಮೂಲಕ ಮಗು ಪಡೆಯಬೇಕಾದರೆ ಆ ದಂಪತಿಗಳು ವಿವಾಹವಾಗಿ ಕನಿಷ್ಠ 5 ವರ್ಷಗಳಾಗಿರಬೇಕೆಂಬ ನಿಯಮ ವಿಧಿಸಿದೆ. ಮಗು ಪಡೆಯುವ ದಂಪತಿಗಳು ತಮ್ಮ ಹತ್ತಿರದ ಸಂಬಂಧಿಕರನ್ನು ಮಾತ್ರ ಬಾಡಿಗೆ ತಾಯಿಯನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು ಹಾಗೂ ವೈದ್ಯಕೀಯ ಖರ್ಚು ವೆಚ್ಚಗಳನ್ನು ಮಾತ್ರ ಭರಿಸಬೇಕು ಎಂದಿದೆ.

**2016ರ ಜೂನ್ 22ರಂದು ಇಸ್ರೋದ ಪಿಎಸ್‌ಎಲ್‌ವಿ ಶ್ರೀಹರಿಕೋಟಾದಿಂದ 22 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾವಣೆ ಮಾಡಿ ದಾಖಲೆ ನಿರ್ಮಿಸಿತ್ತು. ಇದೀಗ ತನ್ನದೇ ದಾಖಲೆಯನ್ನು ಮುರಿದು 68 ಉಪಗ್ರಹಗಳ ಉಡಾವಣೆ ಮಾಡಿ ಮತ್ತೊಂದು ಮೈಲಿಗಲ್ಲು ಸಾಧಿಸಲು ಮುಂದಾಗಿದೆ. ನ್ಯಾನೋ ಉಪಗ್ರಹಗಳ ನಿರ್ಮಾಣ ಕುರಿತು ವಿದೇಶಿ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುತ್ತಿದೆ ಎಂದು ಇಸ್ರೋ ತಿಳಿಸಿದೆ.**

## ರಾಜ್ಯದ ಅಂತರ್ಜಲ ಪಾತಾಳಕ್ಕೆ: ಕೇಂದ್ರ ಜಲ ಆಯೋಗ ಕಳವಳ



ರಾಜ್ಯದಲ್ಲಿ ಕಳೆದ ಒಂದು ದಶಕದಲ್ಲಿ ಅಂತರ್ಜಲ ಮಟ್ಟ ಶೇ. 85ರಷ್ಟು ಕುಸಿದಿದೆ ಎಂಬ ಆತಂಕಕಾರಿ ಸಂಗತಿ ಕೇಂದ್ರ ಜಲ ಆಯೋಗ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿಯಿಂದ ತಿಳಿದುಬಂದಿದೆ.

ನಿರಂತರ ಬರ ಮತ್ತು ಮುಂಗಾರು ಅವಧಿಯಲ್ಲಿ ವಾಡಿಕೆಯಷ್ಟು ಮಳೆ ಬೀಳದಿರುವುದರಿಂದ ಅಂತರ್ಜಲ ಮಟ್ಟದಲ್ಲಿ ಚೇತರಿಕೆ ಕಂಡುಬಂದಿಲ್ಲ. 2016ರ ಜನವರಿ ವರೆಗಿನ ಮಳೆಯ ಕೊರತೆ ಮತ್ತು ಎರಡು ವರ್ಷಗಳ ಬರದ ಪರಿಣಾಮ ಅಂತರ್ಜಲ ಮಟ್ಟವು 2012ರ ಪ್ರಮಾಣಕ್ಕಿಂತಲೂ ಕಡಿಮೆಯಾಗಿದೆ. ಈ ವರ್ಷದ ಮೇ ವರೆಗೆ ಮಳೆ ಆಗದಿದ್ದರಿಂದ ಅಂತರ್ಜಲ ಪುನಶ್ಚೇತನಗೊಳ್ಳುವ ಸಾಧ್ಯತೆ ತೀರಾ ಕಡಿಮೆ. ಅಲ್ಲದೆ, ಕಿರು ನೀರಾವರಿ ಯೋಜನೆಗಳ ವ್ಯಾಪ್ತಿಗೆ ಬರುವ ಕೆರೆಗಳೂ ಒಣಗಿರುವುದರಿಂದ ಅಂತರ್ಜಲ ವೃದ್ಧಿಗೊಳ್ಳುವ ಲಕ್ಷಣ ಕ್ಷೀಣಿಸಿದೆ. ರಾಜ್ಯದ 35 ರಿಂದ 40 ತಾಲ್ಲೂಕುಗಳು 6 ವರ್ಷಗಳಿಂದ ಬರಗಾಲ ಎದುರಿಸುತ್ತಿವೆ. ಅದರಲ್ಲೂ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಜಿಲ್ಲೆಗಳ ಸ್ಥಿತಿಯಂತೂ ಕಳವಳಕ್ಕೀಡು ಮಾಡುವಂತಹದ್ದು. ಈ ದಯನೀಯ ಸ್ಥಿತಿ ಬಗ್ಗೆ ಕರ್ನಾಟಕ ಎಚ್ಚೆತ್ತುಕೊಳ್ಳದಿದ್ದರೆ, ಮುಂದೆ ದುರ್ದಿನಗಳನ್ನು ಎದುರಿಸಬೇಕಾದೀತು ಎಂದು ವರದಿ ತಿಳಿಸಿದೆ.

ನಮ್ಮ ದೇಶದಲ್ಲಿ ಬರವಿದ್ದರೂ ಸಾರ್ವಜನಿಕರು ನೀರಿನ ಬಳಕೆಯ ಪ್ರಮಾಣ ಕಡಿಮೆ ಮಾಡುವುದಿಲ್ಲ. ಮತ್ತೊಂದೆಡೆ ನೀರಿನ ಮರುಪೂರಣವೂ ಆಗುವುದಿಲ್ಲ. ನಮ್ಮ ಪೂರ್ವಜರು ಕಾಪಾಡಿಕೊಂಡು ಬಂದ ಜಲ ನಿಧಿಯನ್ನು ನಾವು ಬಳಸುತ್ತಿದ್ದೇವೆ. ಈಗ ಅಧಿಕ ಪ್ರಮಾಣದಲ್ಲಿ ಅಂತರ್ಜಲ ಬಳಕೆ ಮಾಡುತ್ತಿರುವುದರಿಂದ ಭವಿಷ್ಯದ ಪೀಳಿಗೆ ನೀರಿನ ಕೊರತೆ ಎದುರಿಸಬೇಕಾಗುತ್ತದೆ. ಅಂತರ್ಜಲ ಪಾತಾಳ ಮುಟ್ಟುವುದರಿಂದ ಅದರಲ್ಲಿ ಕರಗದ ಲೋಹದ ಪ್ರಮಾಣ ಮತ್ತು ಲವಣಾಂಶವು ಹೆಚ್ಚುತ್ತಾ ಹೋಗುತ್ತದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ನಿರ್ದೇಶಕ ಶ್ರೀನಿವಾಸರೆಡ್ಡಿ ತಿಳಿಸಿದರು.

ಕಾಶ್ಮೀರ ವಿವಾದ ಕುರಿತಂತೆ ಪಾಕಿಸ್ತಾನದ ಪರವಾಗಿ ತಮ್ಮ ನಿಲುವನ್ನು ಪ್ರದರ್ಶಿಸುತ್ತಿರುವ ಕಾಶ್ಮೀರಿ ಪ್ರತ್ಯೇಕತಾವಾದಿಗಳ ವಿರುದ್ಧ ಮೋದಿ ಸರ್ಕಾರ ಕಠಿಣ ನಿಲುವು ತೆಗೆದುಕೊಳ್ಳುತ್ತಿದ್ದು, ಪ್ರತ್ಯೇಕತಾವಾದಿಗಳಿಗೆ ನೀಡುತ್ತಿರುವ ಸರ್ಕಾರಿ ಸೌಲಭ್ಯಗಳನ್ನು ಶೀಘ್ರದಲ್ಲೇ ಸ್ಥಗಿತಗೊಳಿಸಲು ನಿರ್ಧರಿಸಿದೆ. ಈ ಕುರಿತಂತೆ ಖಾಸಗಿ ಮಾಧ್ಯಮವೊಂದು ವರದಿಮಾಡಿದ್ದು, ಪಾಕ್ ಪರ ತಮ್ಮ ನಿಲುವನ್ನು ಪ್ರದರ್ಶಿಸುತ್ತಿರುವ ಪ್ರತ್ಯೇಕತಾವಾದಿಗಳಿಗೆ ನೀಡುತ್ತಿರುವ ಸರ್ಕಾರಿ ಸೌಲಭ್ಯಗಳಾದ ವಿದೇಶ ಪ್ರಯಾಣ ವ್ಯವಸ್ಥೆ, ವಿಮಾನಯಾನ ಟಿಕೆಟ್, ಹೋಟೆಲ್ ಸೇವೆ, ಭದ್ರತೆ ಹಾಗೂ ವಾಹನ ಸೇವೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಿದೆ ಎಂದಿದೆ. ಪ್ರತ್ಯೇಕತಾವಾದಿಗಳಿಗಾಗಿ ಸರ್ಕಾರ ವರ್ಷಕ್ಕೆ ರೂ. 100 ಕೋಟಿ ಹಣವನ್ನು ಖರ್ಚು ಮಾಡುತ್ತಿದ್ದು, ಇದರಲ್ಲಿ ಕೇಂದ್ರ ಸರ್ಕಾರ ಶೇ. 90ರಷ್ಟು ಹಾಗೂ ರಾಜ್ಯ ಶೇ. 10ರಷ್ಟು ಹಣ ವ್ಯಯ ಮಾಡುತ್ತಿದೆ. ಪ್ರತ್ಯೇಕತಾವಾದಿಗಳ ಭದ್ರತೆಗಾಗಿ ಸರ್ಕಾರಿ 950 ಪೊಲೀಸರನ್ನು ನಿಯೋಜಿಸಿದೆ. ಈ ಕುರಿತಂತೆ ಜಮ್ಮು–ಕಾಶ್ಮೀರದ ಮುಖ್ಯಮಂತ್ರಿಯವರೊಂದಿಗೆ ಕೇಂದ್ರ ಸರ್ಕಾರ ಮಾತುಕತೆ ನಡೆಸಿದೆ ಎನ್ನಲಾಗಿದೆ.

## ಬದುಕು ಒಂದು ತಪಸ್ಸು...

ಬದುಕಿನ ದಾರಿಯಲ್ಲಿ ಕಷ್ಟಗಳೆಂಬ ಉಬ್ಬುಗಳು ಎದುರಾದರೂ ಮುಂದೆ ಸುಖವೆಂಬ ಜಾಡು ಬಂದೇ ಬರುತ್ತದೆ, ಅಲ್ಲಿಯವರೆಗೂ ತಾಳ್ಮೆಯಿಂದ ಕಾಯುವುದೇ ಒಂದು ತಪಸ್ಸು, ಜೀವನವೇ ಒಂದು ತಪಸ್ಸು...

**ಸೌರಭ್ ನಿಂಬಕರ್:** ಅದು ಮುಂಬೈನ ದೊಂಬಿವಾಲಿಯ ಲೋಕಲ್ ರೈಲು ನಿಲ್ದಾಣ. ಅಲ್ಲಿಗೆ ಗಿಟಾರ್ ಹಿಡಿದು ಬರುವ ಯುವಕ ಲೋಕಲ್ ಟ್ರೇನ್ ಹತ್ತಿ ದಾದರ್‌ಗೆ ಪ್ರಯಾಣ ಬೆಳೆಸುತ್ತಾರೆ. ರೈಲಿನಲ್ಲಿ ಗಿಟಾರ್ ನುಡಿಸುತ್ತ ಹಾಡುತ್ತಾರೆ. ಪ್ರಯಾಣಿಕರು ಕೇಳುವ ಹಾಡುಗಳನ್ನು ಹಾಡುತ್ತ ಅವರನ್ನು ರಂಜಿಸುತ್ತಾರೆ. ಅವರು ಕೊಟ್ಟ ಹಣವನ್ನು ಪಡೆದು ದಾದರ್‌ನಲ್ಲಿರುವ ಔಷಧಿ ಕಂಪೆನಿಯೊಂದಕ್ಕೆ ಕೆಲಸಕ್ಕೆ ಹೋಗುತ್ತಾರೆ. ಮತ್ತೆ ಸಂಜೆ ಅದೇ ಲೋಕಲ್ ಟ್ರೇನ್ ಹತ್ತಿ ಪ್ರಯಾಣಿಕರನ್ನು ರಂಜಿಸಿ ಅವರು ಕೊಟ್ಟ ಹಣವನ್ನು ಸ್ವೀಕರಿಸಿ ದೊಂಬಿವಾಲಿಯಲ್ಲಿ ಇಳಿದು ಮನೆಗೆ ಮರಳುತ್ತಾರೆ. ಹೀಗೆ ಸಂಗ್ರಹಿಸಿದ ಹಣವನ್ನು ಕ್ಯಾನ್ಸರ್ ಪೀಡಿತರಿಗೆ ಕೊಡುತ್ತಾರೆ. ಇದು ಮುಂಬೈ ಮೂಲದ ಯುವಕ ಸೌರಭ್ ನಿಂಬಕರ್ ಅವರ ಸಮಾಜ ಸೇವೆಯ ಪರಿ.

ಔಷಧ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸೌರಭ್, ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ವಾರದಲ್ಲಿ ಮೂರು ದಿನ ಲೋಕಲ್ ಟ್ರೇನ್‌ನಲ್ಲಿ ಗಿಟಾರ್ ನುಡಿಸುವ ಮೂಲಕ ಕ್ಯಾನ್ಸರ್ ಪೀಡಿತರಿಗೆ ದೇಣಿಗೆ ಸಂಗ್ರಹಿಸುತ್ತಿದ್ದಾರೆ. ಸೌರಭ್ ಅವರ ಈ ಸೇವೆ ಹಿಂದೆ ಮನಕಲಕುವ ಕಥೆ ಇದೆ. ಸೌರಭ್ ತಾಯಿ ಕೂಡ ಕ್ಯಾನ್ಸರ್‌ಗೆ ತುತ್ತಾಗಿ ಆಸ್ಪತ್ರೆ ಸೇರಿದ್ದರು. ಆಗ ಸೌರಭ್ ಇನ್ನೂ ಕಾಲೇಜು ವಿದ್ಯಾರ್ಥಿ! ತಾಯಿಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ಹಣವನ್ನು ಹೊಂದಿಸಲು ಕಷ್ಟ ಪಟ್ಟರು. ಎರಡು ವರ್ಷ ಕಾಲೇಜಿಗೆ ಹೋಗದೇ ತಾಯಿಯ ಆರೈಕೆ ಮಾಡಿದರು. ಈ ಹಂತದಲ್ಲಿ ನೋವನ್ನು ಮರೆಯಲು ಗಿಟಾರ್ ನುಡಿಸುವುದನ್ನು ಕಲಿತರು. ಆಸ್ಪತ್ರೆಗೆ ತೆರಳಿ ಅಲ್ಲಿಯೂ ಗಿಟಾರ್ ನುಡಿಸಿ ತಾಯಿ ಮತ್ತು ಇತರ ರೋಗಿಗಳ ಮನಸ್ಸನ್ನು ತಣಿಸುತ್ತಿದ್ದರು. ಐದಾರು ಲಕ್ಷ ರೂಪಾಯಿ ಖರ್ಚು ಮಾಡಿದರೂ ಸೌರಭ್ ತಾಯಿ ಬದುಕುಳಿಯಲಿಲ್ಲ.

ಕ್ಯಾನ್ಸರ್ ಪೀಡಿತರ ಕುಟುಂಬದವರ ಕಷ್ಟವನ್ನು ಹತ್ತಿರದಿಂದ ನೋಡಿರುವ ಹಾಗೂ ಸ್ವತಃ ಕಷ್ಟವನ್ನು ಅನುಭವಿಸಿರುವ ಸೌರಭ್, ಅಂಥವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸ್ವಯಂ ಸೇವಾ ಸಂಸ್ಥೆಯೊಂದರ ಜತೆ ಸೇರಿ ನಿಧಿ ಸಂಗ್ರಹಿಸುತ್ತಿದ್ದಾರೆ.

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-9-2016



# ಬನ್ನಿ, ಸೈನಿಕರಿಗೆ ನೆರವಾಗೋಣ...



ಸೈನಿಕರು ರಾಷ್ಟ್ರರಕ್ಷಣೆಗಾಗಿ ಹಗಲಿರುಳು ಶ್ರಮಿಸುತ್ತಾರೆ, ಜೀವದ ಹಂಗು ತೊರೆದು ಹೋರಾಡುತ್ತಾರೆ. ಹೀಗೆ ಸಾವಿನೊಡನೆ ಸೆಣಸುತ್ತಲೇ ಸಾಗುವ ಯೋಧ ಯಾವ ಕ್ಷಣದಲ್ಲಿ ಹುತಾತ್ಮನಾಗುತ್ತಾನೆ ಎಂದು ಹೇಳಲು ಸಾಧ್ಯವಿಲ್ಲ. ಹೀಗೆ ದೇಶಕ್ಕಾಗಿ ಪ್ರಾಣ ತೊರೆಯುವ ಸೈನಿಕರಿಗೂ ತಂದೆ-ತಾಯಿ, ಹೆಂಡತಿ-ಮಕ್ಕಳು, ಅಕ್ಕ-ತಂಗಿ ಎಂಬ ಬಾಂಧವ್ಯದ ನಂಟಿರುವ ಕುಟುಂಬ ಇದ್ದೇ ಇರುತ್ತದೆ. ಎಷ್ಟೋ ಕುಟುಂಬಗಳಲ್ಲಿ ಸೈನಿಕನ ಸಂಬಳವೇ ಜೀವನಾಧಾರವಾಗಿರುತ್ತದೆ. ಹೀಗಿರುವಾಗ, ಆ ಸೈನಿಕ ಹುತಾತ್ಮನಾಗಿಬಿಟ್ಟರೆ ಆ ಕುಟುಂಬದ ಸ್ಥಿತಿ? ಸರ್ಕಾರವೇನೋ ಒಂದಿಷ್ಟು ಪರಿಹಾರ ನೀಡುತ್ತದೆ. ಆದರೆ, ಇಂದಿನ ದಿನಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಅವರ ಮುಂದಿನ ಬದುಕನ್ನು ಕಟ್ಟಲು ಅದರಿಂದ ಸಾಧ್ಯವಾದೀತೆ? ಎಂಬ ಪ್ರಶ್ನೆ ಆಗಾಗ ಕಾಡಿ ಒಂದಿಷ್ಟು ಸಮಾಜಪರ ಸಂವೇದನೆಯುಳ್ಳ ಸಂಘಟನೆಗಳು, ವ್ಯಕ್ತಿಗಳು ಹುತಾತ್ಮ ಸೈನಿಕರ ಕುಟುಂಬಕ್ಕೆ ನೆರವು ನೀಡುತ್ತಿದ್ದವು. ಆದರೆ, ಸೈನಿಕರೊಂದಿಗೆ, ಅವರ ಕುಟುಂಬಗಳೊಂದಿಗೆ ಭಾವನಾತ್ಮಕ ನಂಟು ಹೊಂದಿರುವ ಜನಸಾಮಾನ್ಯರು ಕೂಡ ನೆರವು ನೀಡುವ ಇಚ್ಛಾಶಕ್ತಿ ಹೊಂದಿದ್ದರೂ ಈವರೆಗೆ ಅದಕ್ಕೆ ತಕ್ಕ ವ್ಯವಸ್ಥೆಯಿರಲಿಲ್ಲ. ಈ ನಿಟ್ಟಿನಲ್ಲಿ ಪರಿಹಾರ ಒದಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

ಜನಸಾಮಾನ್ಯರೇ ಹುತಾತ್ಮ ಕುಟುಂಬದವರಿಗೆ ನೆರವು ನೀಡಲು ಸಾಧ್ಯವಾಗುವಂತೆ ರಕ್ಷಣಾ ಸಚಿವಾಲಯ ಬ್ಯಾಂಕ್ ಖಾತೆಯೊಂದನ್ನು ತೆರೆದಿದೆ – ದಿಲ್ಲಿಯ ಸಿಂಡಿಕೇಟ್ ಬ್ಯಾಂಕ್‌ನಲ್ಲಿ. ಈ ಖಾತೆಗೆ ಜನಸಾಮಾನ್ಯರು ತಮಗೆ ಸಾಧ್ಯವಾದಷ್ಟು ನೆರವನ್ನು ನೀಡಬಹುದಾಗಿದೆ. ಇಲ್ಲಿ ಸಂಗ್ರಹಗೊಂಡ ಹಣವನ್ನು ರಕ್ಷಣಾ ಸಚಿವಾಲಯದ ವತಿಯಿಂದಲೇ ಹುತಾತ್ಮ ಸೈನಿಕರ ಕುಟುಂಬಕ್ಕೆ ತಲುಪಿಸಲಾಗುತ್ತದೆ.

ಬಹಳಷ್ಟು ಜನರು ಪಿಎಂಒ ವೆಬ್‌ಸೈಟ್ ಮತ್ತು ಪ್ರಧಾನಿ ಮೋದಿ ಆಪ್‌ಗೆ ಸಂದೇಶಗಳನ್ನು ರವಾನಿಸಿ ಹುತಾತ್ಮ ಸೈನಿಕರ ಕುಟುಂಬಗಳಿಗೆ ನಾವೂ ನೆರವು ನೀಡಬೇಕು, ಅದು ತಲುಪಿಸಲು ಮಾರ್ಗ-ಮಾಧ್ಯಮವೇನು? ಎಂದು ಪ್ರಶ್ನಿಸಿದ್ದರು. ರಕ್ಷಣಾ ಸಚಿವ ಮನೋಹರ್ ಪರಿಕ್ಕರ್ ಕೂಡ ಈ ಬಗೆಯ ಪ್ರಶ್ನೆಗಳನ್ನು ಎದುರಿಸಿದ್ದರು. ಹಾಗಾಗಿಯೇ, ಪರಿಕ್ಕರ್ ಆಸಕ್ತಿ ಹಾಗೂ ಸೂಚನೆ ಮೇರೆಗೆ ಜೂನ್ 2016ರಲ್ಲಿ ಈ ಬ್ಯಾಂಕ್ ಖಾತೆ ತೆರೆಯಲಾಗಿದೆ.

**ಇಂತಿದೆ ಬ್ಯಾಂಕ್ ಖಾತೆ ವಿವರ:**

**ಖಾತೆ ಹೆಸರು:** ಆರ್ಮಿ ವೆಲ್ಫೇರ್-ಫಂಡ್ ಬ್ಯಾಟಲ್ ಕ್ಯಾಷುಯಾಲ್ಟೀಸ್ (Army Welfare Fund Battle Casualties)

**ಖಾತೆ ಸಂಖ್ಯೆ:** 90552010165915


**ಐಎಫ್‌ಎಸ್‌ಸಿ ಕೋಡ್:** SYNB0009055

**ಬ್ಯಾಂಕ್:** ಸಿಂಡಿಕೇಟ್ ಬ್ಯಾಂಕ್, ಸೌತ್ ಬ್ಲಾಕ್ ಬ್ರಾಂಚ್, ದಿಲ್ಲಿ

### ಓದುಗರೇ ಗಮನಿಸಿ

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04.
ಮೊಬೈಲ್: 97391 83021

# ಪಂಡಿತ್ ದಿನದಯಾಳ್ : ಅಪ್ರತಿಮ ಸಮಾಜ ಸುಧಾರಕ, ತತ್ತ್ವಜ್ಞಾನಿ



ಈ ವರ್ಷ ದೇಶ ಕಂಡ ಅಪ್ರತಿಮ ಸಮಾಜ ಸುಧಾರಕ, ತತ್ತ್ವಜ್ಞಾನಿ – ಪಂಡಿತ್ ದೀನದಯಾಳ್ ಉಪಾಧ್ಯಾಯರ (25 ಸೆಪ್ಟೆಂಬರ್ 1916 – 11 ಫೆಬ್ರುವರಿ 1968) ಜನ್ಮ ಶತಾಬ್ದಿ ವರ್ಷ. ತಮ್ಮ ಕಿರಿಯ ವಯಸ್ಸಿನಲ್ಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಂಪರ್ಕಕ್ಕೆ ಬಂದ ಪಂಡಿತ್ ದೀನದಯಾಳರು ಸಂಘದ ಪ್ರಚಾರಕರಾಗಿ ಸೇವೆ ಸಲ್ಲಿಸಿದರು. ಅಂದು ಜನ ಸಂಘವೆಂಬ ರಾಜಕೀಯ ಪಕ್ಷವನ್ನು ಸಂಘಟಿಸಿ ಪಕ್ಷದಲ್ಲಿ ಶಿಸ್ತನ್ನು ಮನೆಮಾಡುವಲ್ಲಿ ದೀನದಯಾಳ ಉಪಾಧ್ಯಾಯರ ಕೊಡುಗೆ ಅಪಾರ. ಜನಸಂಘದ ಸಂಸ್ಥಾಪಕರಾದ ಶ್ಯಾಮ್‌ಪ್ರಸಾದ್ ಮುಖರ್ಜಿ, ತಮಗೆ ಇಬ್ಬರು ದೀನದಯಾಳರು ಸಿಕ್ಕಿದ್ದರೆ ಭಾರತದ ರಾಜಕೀಯ ವ್ಯವಸ್ಥೆಯನ್ನೇ ಬದಲಿಸಬಹುದಿತ್ತು ಎಂಬ ಪ್ರಶಂಸನೀಯ ಮಾತುಗಳನ್ನು ಆಡಿದ್ದರು. ಏಕಾತ್ಮ ಮಾನವ ದರ್ಶನವನ್ನು ವಿಶ್ವಕ್ಕೆ ವ್ಯಾಖ್ಯಾನಿಸಿದವರು ದೀನದಯಾಳರು.

ಭಾರತದ ರಾಜಕೀಯ ವ್ಯವಸ್ಥೆಗೆ ಒಂದು ಭದ್ರ ಹಾಗೂ ಸದೃಢ ಅಡಿಪಾಯ ಹಾಗೂ ಸ್ಪಷ್ಟ ದಿಕ್ಕು ನೀಡಿದ ಗಣ್ಯರ ಸಾಲಿನಲ್ಲಿ ಇವರಿರುತ್ತಾರೆ. ಸಂಪೂರ್ಣ ದೇಶ ರಾಜಕೀಯವಾಗಿ ಕಾಂಗ್ರೆಸ್ ಮಯವಾಗಿದ್ದ ಸಂದರ್ಭದಲ್ಲಿ ಪರ್ಯಾಯ ರಾಜಕೀಯ ವ್ಯವಸ್ಥೆಯಾಗಿ ಜನಸಂಘವನ್ನು ಕಟ್ಟಿ ಜನರ ವಿಶ್ವಾಸಗಳಿಸುವಂತಹ ಭದ್ರಬುನಾದಿ ಹಾಕಿಕೊಟ್ಟವರು ದೀನದಯಾಳ್‌ಜೀ. ಸ್ವಾತಂತ್ರ್ಯಾನಂತರ ನೆಹರು ನೇತೃತ್ವದ ಕಾಂಗ್ರೆಸ್, ಪಾಶ್ಚಾತ್ಯರಿಂದ ಎರವಲು ಪಡೆದ ಪ್ರತ್ಯೇಕತಾವಾದ, ಸಮಾಜವಾದ, ಸಮತಾವಾದದಿಂದಷ್ಟೇ ಭಾರತ ಮುಂದುವರಿಯುತ್ತದೆ ಹಾಗೂ ಬದಲಾವಣೆ ಸಾಧ್ಯ ಎಂಬ ಧೋರಣೆ ಹೊಂದಿತ್ತು. ಇದೇ ಸಮಯದಲ್ಲಿ ದೀನದಯಾಳರು ಆಧುನಿಕತೆಯನ್ನು ಸ್ವೀಕರಿಸುತ್ತಾ, ಪ್ರಾಚೀನ ಭಾರತೀಯ ಮೌಲ್ಯಗಳ ಆಧಾರದ ಮೇಲೆ ಸ್ವತಂತ್ರ ಭಾರತವನ್ನು ಕಟ್ಟಬೇಕೆಂದು ಶ್ರಮಿಸಿದರು.

ಉಪಾಧ್ಯಾಯರು 'ಜಗತ್ತಿನಲ್ಲಿ ಯಾವೊಬ್ಬ ವ್ಯಕ್ತಿಯೂ ಪ್ರತ್ಯೇಕನಲ್ಲ. ಪ್ರತಿಯೊಬ್ಬನೂ ಮತ್ತೊಬ್ಬನ ಆಸರೆಯನ್ನಿಟ್ಟುಕೊಂಡು, ಮುನ್ನಡೆಯುತ್ತಾನೆ' ಎಂಬ ಏಕಾತ್ಮತಾ ಮಾನವ ಎಂಬ ತತ್ತ್ವವನ್ನು ಪ್ರತಿಪಾದಿಸಿದರು. ಜಗತ್ತು ಸಂಘರ್ಷಾತ್ಮಕವಲ್ಲ; ಸೃಜನಾತ್ಮಕ ಹಾಗೂ ಬೀಜವು ವೃಕ್ಷರೂಪದಲ್ಲಿ ಹೊರಬರುವುದು ಸ್ವಂತದ ವಿಕಾಸಕ್ಕಾಗಿ ಎಂದು ಹೇಳುತ್ತಿದ್ದರು. ಅಂತ್ಯೋದಯ – ಸಮಾಜದ ದುರ್ಬಲಾತಿ ದುರ್ಬಲರನ್ನು ಸಬಲಗೊಳಿಸುವ ಪ್ರಯತ್ನವನ್ನು ಪರಿಚಯಿಸಿ ಆ ನಿಟ್ಟಿನಲ್ಲಿ ಸೇವೆಸಲ್ಲಿಸಿದವರು ಇವರು. ಅಂತ್ಯೋದಯ ಹಾಗೂ ಗ್ರಾಮಗಳ ವಿಕಾಸದಿಂದಲೇ ಭಾರತದ ಆರ್ಥಿಕ ವ್ಯವಸ್ಥೆ ಅವಲಂಬಿತ ಎಂದು ಪ್ರತಿಪಾದಿಸಿದ್ದ ದೀನದಯಾಳರು, ನಮ್ಮ ಸಮಾಜದಲ್ಲಿ ಹಿಂದೊಮ್ಮೆ ನೆಲೆಸಿದ್ದ ಪರಸ್ಪರ ಸ್ನೇಹ, ಸಹಕಾರಗಳು ಆತ್ಮವಿಸ್ಮೃತಿಯಿಂದಾಗಿ ದೂರವಾಗಿವೆ ಹಾಗೂ ಭಾರತದಂತಹ ವೈವಿಧ್ಯತೆಯಿಂದ ಕೂಡಿರುವ ದೇಶದಲ್ಲಿ ಇವು ಪುನಃಸ್ಥಾಪಿತಗೊಂಡರೆ ಭಾರತದ ವಿಕಾಸ ಹಾಗೂ ಗುಲಾಮಿತನಕ್ಕೆ ಶರಣಾಗುವ ಸಂದರ್ಭ ಒದಗುವುದಿಲ್ಲವೆಂದು ಬೋಧಿಸಿದ್ದರು. ರಾಜಕೀಯ ಲಾಭಕ್ಕಾಗಿ ದೇಶಕ್ಕೆ ಅಹಿತಕರವಾದುದನ್ನು ಪ್ರೋತ್ಸಾಹಿಸುವ– ಒಪ್ಪುವ ನಾಯಕರನ್ನು ಅವರು ಕಟುವಾಗಿ ಖಂಡಿಸುತ್ತಿದ್ದರು. ವ್ಯಕ್ತಿಗಿಂತ ಸಂಘಟನೆ ಹಿರಿದಾದುದು ಮತ್ತು ಕೆಲ ಮೌಲ್ಯಗಳನ್ನು ಸಂಘಟನೆ ಮಾದರಿಯನ್ನಾಗಿಟ್ಟುಕೊಂಡಿರುತ್ತದೆ. ಈ ಮೌಲ್ಯಗಳನ್ನು ಒಪ್ಪುವವರು, ಅನುಸರಿಸುವವರು ಮಾತ್ರವೇ ಸಂಘಟನೆಯ ನಾಯಕರಾಗಲು ಯೋಗ್ಯರು ಎಂದು ನಿಷ್ಠುರವಾಗಿ ನುಡಿದವರು ದಿನದಯಾಳ್ ಜೀ.

**'ಕಾಯಲು ಸಿದ್ಧ' ಮಹಿಳಾ ಅಭಿಯಾನಕ್ಕೆ ಭಾರೀ ಬೆಂಬಲ!**

# ಶಬರಿಮಲೆ ಮಹಿಳೆಯರ ಪ್ರವೇಶ ನಿಷೇಧ

ಕೇರಳದ ಪ್ರಸಿದ್ಧ ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಮಹಿಳೆಯರ ಪ್ರವೇಶಕ್ಕೆ ಅವಕಾಶ ನೀಡಬೇಕೆಂದು ಸ್ಥಾಪಿತ ಹಿತಾಸಕ್ತಿಗಳು ನಡೆಸುತ್ತಿರುವ ಹೋರಾಟವನ್ನು ವಿರೋಧಿಸಿ, ಈಗಿರುವ ವ್ಯವಸ್ಥೆಯನ್ನು ಬೆಂಬಲಿಸಿ ಆನ್‌ಲೈನ್ ಮೂಲಕ ಹೊಸ ಅಭಿಯಾನವೊಂದು ಆರಂಭಗೊಂಡಿದೆ. ಇದಕ್ಕೆ ಸಾರ್ವಜನಿಕರಿಂದ ಭಾರೀ ಬೆಂಬಲ ವ್ಯಕ್ತವಾಗುತ್ತಿದೆ.

ಅಯ್ಯಪ್ಪಸ್ವಾಮಿ ದೇಗುಲದ ಧಾರ್ಮಿಕ ಪರಂಪರೆಯನ್ನು ಬೆಂಬಲಿಸಿರುವ ಮಹಿಳೆಯರ ಗುಂಪೊಂದು "ಕಾಯಲು ಸಿದ್ಧ" (#Readytowait) ಎಂಬ ಆಂದೋಲನ ಆರಂಭಿಸಿದೆ. 'ಪವಿತ್ರ ಶಬರಿಮಲೆಯಲ್ಲಿ ಹತ್ತು ವರ್ಷದೊಳಗಿನ ಹಾಗೂ 55ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಮಾತ್ರ ಪ್ರವೇಶ ಇದೆ. ಮಹಿಳೆಯರು ಋತುಮತಿಯಾಗುವ ವಯಸ್ಸಿನಲ್ಲಿ ದೇಗುಲಕ್ಕೆ ಹೋದರೆ ಮೈಲಿಗೆಯಾಗುತ್ತದೆ ಎಂಬುದು ಶಬರಿಮಲೆಯ ನಂಬಿಕೆ. ಹಾಗಾಗಿ ನಾವು 55 ವರ್ಷದವರೆಗೆ ಕಾಯಲು ಸಿದ್ಧರಿದ್ದೇವೆ' ಎಂದು ಈ ಅಭಿಯಾನದಲ್ಲಿ ಪ್ರಚಾರ ಮಾಡಲಾಗುತ್ತಿದೆ.




ಶಬರಿಮಲೆ ಅಯ್ಯಪ್ಪ ಕ್ಷೇತ್ರಕ್ಕೆ ಎಲ್ಲ ವಯೋಮಾನದ ಮಹಿಳೆಯರಿಗೆ ಪ್ರವೇಶ ನೀಡಲು ಆಗ್ರಹಿಸಿ ಪ್ರಾರಂಭವಾಗಿರುವ 'ರೈಟ್ ಟು ಪ್ರೇ' ಅಭಿಯಾನಕ್ಕೆ ಕೆಲವು ಮಹಿಳೆಯರು 'ರೆಡಿ ಟು ವೈಟ್' ಎಂಬ ಅಭಿಯಾನ ಪ್ರಾರಂಭಿಸಿ ತಿರುಗೇಟು ನೀಡಿದ್ದಾರೆ. ಅಂಜಲಿ ಜಾರ್ಜ್ ಎಂಬವರು ಫೇಸ್‌ಬುಕ್‌ನಲ್ಲಿ ಶಬರಿಮಲೆಗೆ ಮಹಿಳೆಯು ಯಾತ್ರೆ ಗೈದಾಕ್ಷಣ ಅವರಿಗೆ ಸಮಾನತೆ ಸಿಗುತ್ತದೆಯೇ ಎಂದು ಪ್ರಶ್ನಿಸಿ ಬರೆದ ಲೇಖನವೇ 'ರೆಡಿ ಟು ವೈಟ್' ಅಭಿಯಾನಕ್ಕೆ ಸ್ಫೂರ್ತಿ. ಲಿಂಗ ಸಮಾನತೆ ಹೋರಾಟದಲ್ಲಿ ದೇವರನ್ನು ಮನುಷ್ಯನ ಮಟ್ಟಕ್ಕಿಳಿಸಲಾಗಿದೆ. ಪ್ರಕೃತಿ ಮತ್ತು ಆರಾಧನೆಗೆ ಅವುಗಳದ್ದೇ ಆದ ವಿಶಿಷ್ಟ ವಿಧಾನಗಳಿವೆ. ಸಮಾನತೆಯ ನೆಪದಲ್ಲಿ ಇವುಗಳನ್ನು ಉಲ್ಲಂಘಿಸುವುದು ಏಕೆ ಎಂದು ಅಂಜಲಿ ಪ್ರಶ್ನಿಸಿದ್ದಾರೆ.

ವಿದೇಶಗಳಿಂದ ಹಣಕಾಸು ನೆರವು ಪಡೆಯುತ್ತಿರುವ ಹುಸಿ ಮಹಿಳಾವಾದಿಗಳು ಮತ್ತು ನಾಸ್ತಿಕ ಕಮ್ಯುನಿಸ್ಟರು ಭಾರತೀಯ ಪರಂಪರೆಯಲ್ಲಿ ಹಸ್ತಕ್ಷೇಪ ಮಾಡುವುದು ಬೇಡ. ನಾನು ನಮ್ಮ ಸಂಪ್ರದಾಯಗಳನ್ನು ಗೌರವಿಸುತ್ತೇನೆ. ಹೀಗಾಗಿ ಸರಿಯಾದ ಪ್ರಾಯದಲ್ಲೇ ಶಬರಿಮಲೆ ಯಾತ್ರೆಗೈಯ್ಯುತ್ತೇನೆ. ನಕಲಿ ಮಹಿಳಾವಾದಿಗಳ ಸಂಚಿಗೆ ನಾನು ಬಲಿಯಾಗುವುದಿಲ್ಲ ಎಂದು ಅಂಜಲಿ ತಿಳಿಸಿದ್ದಾರೆ.

ಉತ್ತರ ಭಾರತದ ಲಾಬಿ ಮತ್ತು ನಕಲಿ ಮಹಿಳಾವಾದಿಗಳು ಮಹಿಳೆಯರು ದೇವಸ್ಥಾನ ಪ್ರವೇಶಿಸುವುದೇ 21ನೇ ಶತಮಾನದ ಅತಿ ದೊಡ್ಡ ಸಮಸ್ಯೆ ಎಂದು ಭಾವಿಸಿದ್ದಾರೆ. ದೇವಸ್ಥಾನ ಲಿಂಗಸಮಾನತೆಯ ಕೇಂದ್ರವಾಗುವುದು ಹೇಗೆ? 21ನೇ ಶತಮಾನದಲ್ಲೂ ಬಾಲ್ಯ ವಿವಾಹವಾಗುತ್ತಿದೆ ಎನ್ನುವುದು ಅವರಿಗೆ ದೊಡ್ಡ ಸಮಸ್ಯೆಯಲ್ಲ. ಅತ್ಯಾಚಾರ, ಕೌಟುಂಬಿಕ ಹಿಂಸಾಚಾರ, ವರದಕ್ಷಿಣೆ ಹೀಗೆ ಮಹಿಳೆಯರನ್ನು ಕಾಡುವ ನೂರಾರು ಜ್ವಲಂತ ಸಮಸ್ಯೆಗಳಿರುವಾಗ ದೇವಸ್ಥಾನಗಳಲ್ಲಿ ಮಹಿಳೆಯರಿಗೆ ಪ್ರವೇಶ ದೊರಕಿಸಿಕೊಡಲು ಹೋರಾಡುವುದೇ ದೊಡ್ಡ ಸಾಧನೆ ಎಂದು ಅವರು ಭಾವಿಸಿರುವುದು ದುರದೃಷ್ಟಕರ ಎಂದು ತಿರುವನಂತಪುರದ ಕವಿತಾನಿರೂಪ್ ಅಭಿಪ್ರಾಯಪಟ್ಟಿದ್ದಾರೆ.

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಮೊ: 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.